ಶ್ರೀಃ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

ಧರ್ಮೋದ್ಧಾರ.

ಲೇಖಕ:—

ವೇ॥ ಶ್ರೀಪಾದದಾಸ, ಹಂಡೆ.

ಶ್ರೀಕೃಷ್ಣಮುದ್ರಣಾಲಯ, ಉಡುಪಿ.

1925.

|| ಶ್ರೀಃ ||

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ,

ಉಡುಪಿ.

ಧರ್ಮೋದ್ಧಾರ.

ಈ ಪುಸ್ತಕವು

ವೇ|| ಹಂಡೆ ಶ್ರೀಪಾದದಾಸರಿಂದ ವಿರಚಿಸಲ್ಪಟ್ಟು,

ಪಾವಂಜೆ ಗುರುರಾಯರಿಂದ

ಪ್ರಕಟಿಸಲ್ಪಟ್ಟಿತು.

ಪ್ರಥಮಾವೃತ್ತಿ.

ಶ್ರೀಕೃಷ್ಣಮುದ್ರಣಾಲಯ, ಉಡುಪಿ.

1925.

ಬೆಲೆ: 0—4—0.

ಈ ಪುಸ್ತಕವು ಪಾವಂಜೆ ಗುರುರಾವ್, ಇವರ ಉಡುಪಿ ಶ್ರೀಕೃಷ್ಣಮುದ್ರ
ಣಾಲಯದಲ್ಲಿ ಮುದ್ರಿಸಲ್ಪಟ್ಟು, ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಿಂದ
ಪ್ರಕಟಿಸಲ್ಪಟ್ಟಿತು. ಶಾ. ಶಕ ೧೮೪೭. 1925.

ಉಪೋದ್ಘಾತವು.

॥ ಶ್ರೀಗುರುರಾಜೋ ವಿಜಯತೇ ॥

ಆಸ್ತಿಕ ಮಹಾಶಯರಲ್ಲಿ ವಿಜ್ಞಾಪಿಸುವುದೇನೆಂದರೆ,

ದ್ವೈತಮತಸ್ಥಾಪನಾಚಾರ್ಯ ಸತ್ಸಂಪ್ರದಾಯ ಪ್ರವರ್ತಕರಾದ ಉಡುಪಿ ಪಲಮಾರುಮಠದ ಶ್ರೀರಘುಪ್ರಿಯತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ ಶ್ರೀರಘುಮಾನ್ಯತೀರ್ಥ ಶ್ರೀಪಾದಂಗಳವರ ಆಜ್ಞಾಧಾರಕನಾಗಿ ಮಹಾತ್ಮರ ಪ್ರೋತ್ಸಾಹದಿಂದ ನಮ್ಮ ಆರ್ಯರಿಗೂ, ಆರ್ಯಧರ್ಮಕ್ಕೂ, ಯುಗಾಂತರಗಳಿಂದಲೂ ಆಗಾಗ್ಯೆ ಬಂದೊದಗುತ್ತಿದ್ದ ವಿಪತ್ತು, ಅಂತಹ ವಿಪತ್ಕಾಲದಲ್ಲಿಯೂ, ನಮ್ಮಾರ್ಯರು ಧರ್ಮವನ್ನು ಬಿಡದೆ ಹೇಗೆ ಕಾಪಾಡಿಕೊಂಡರು, ಮತ್ತು ವಿಪತ್ತು ಪರಿಹಾರವಾದುದು ಹೇಗೆ, ಎಂಬೀ ವಿಷಯಗಳನ್ನು ಕುರಿತು ನನ್ನ ಯಥಾಮತಿ ಸಜ್ಜನರ ಸೇವೆ ಎಂಬುವ ಅಭಿಪ್ರಾಯದಿಂದ, **ಧರ್ಮೋದ್ಧಾರ**ವೆಂಬುವ ಈ ಚಿಕ್ಕ ಪುಸ್ತಕವನ್ನು ಬರೆದು ಉಡುಪಿ ಅದಮಾರುಮಠದ ವಿಬುಧಾಧಿರಾಜತೀರ್ಥಶ್ರೀಪಾದಂಗಳವರ ಕರಕಮಲ ಸಂಜಾತರಾದ ಪರ್ಯಾಯ ಶ್ರೀಪಾದಂಗಳವರಾದ ವಿಬುಧಪ್ರಿಯತೀರ್ಥ ಶ್ರೀಪಾದಂಗಳವರ ಪಾದಕಮಲಾಶ್ರಯದಿಂದ ರಚಿಸಿದ ಈ ಗ್ರಂಥವನ್ನು ಶ್ರೀರಾಘವೇಂದ್ರತೀರ್ಥ ಶ್ರೀಪಾದಂಗಳವರ ಚರಣಕಮಲಗಳಲ್ಲಿ ಅರ್ಪಿಸಿರುತ್ತೇನೆ.

ಇದನ್ನು ಅಚ್ಚು ಹಾಕುವುದರಲ್ಲಿ ಸಹಾಯಕರಾಗುತ್ತೇವೆಂದು ಭರವಸೆ ಕೊಟ್ಟು ಸಹಾಯ ಮಾಡಿದ **ಪಾವಂಜೆ ಗುರುರಾಯರಿಗೆ** ಇದರ ಯಾವತ್ತು ವಿಶಿಷ್ಟ ಹಕ್ಕು ಬಾಧ್ಯತೆಯನ್ನೂ ಸಂತೋಷಪೂರ್ವಕ ಕೊಟ್ಟಿರುತ್ತೇನೆ. ನಾನು ಪ್ರಯತ್ನಿಸಿದುದು ಕುಂಟನು ಪರ್ವತವನ್ನೇರಲಪೇಕ್ಷಿಸುವಂತಾದರೂ, ಇದರಲ್ಲಿರಬಹುದಾದ ಒಂದೆರಡು ಗ್ರಾಹ್ಯವಾಕ್ಯಗಳನ್ನಾ

ದರೂ ಬಾಲಭಾಷೆ ಎಂಬುವ ಅಭಿಮಾನದಿಂದ ಸ್ವೀಕರಿಸಿ, ಇದೇ ನನ್ನ ಪ್ರಥಮ ಪ್ರಯತ್ನವಾದುದರಿಂದ, ದೋಷಗಳನ್ನು ಮನ್ನಿಸಿ, ಶ್ರಮ ಸಾರ್ಥಕಗೊಳಿಸಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುವ,

ಉಡುಪಿ, ತಾ. 15—6—'25.

ಶ್ರೀಮದಾಚಾರ್ಯರ ಭಕ್ತರ ಪಾದ ಧೂಳಿ.

ಶ್ರೀಪಾದದಾಸ, ಹಂಡೆ.

ಶ್ರೀಃ

ಶ್ರೀಗುರುರಾಜೋ ವಿಜಯತೇ

॥ ಶ್ರೀಹಯಗ್ರೀವಾಯ ನಮಃ ॥

ಧರ್ಮೋದ್ಧಾರ.

ಶ್ರೀಹರಿಗುರುಗಳಿಗೊಂದಿಸಿ ವಿಜ್ಞಾಪಿಸುವುದೇನೆಂದರೆ—

ಆಸ್ತಿಕಮಹಾಶಯರೇ,

ಸೃಷ್ಟ್ಯಾದಿಯಿಂದಲೂ ಸಾಧುಗಳಿಗೆ ಆಗಾಗ್ಯೆ ಕಷ್ಟಪರಂಪರೆಗಳು ಬಂದೊದಗುತ್ತಲೇ ಇವೆ. ಮಿಕ್ಕುಳಿದ ಸಾಧು ಸತ್ಪುರುಷರ ಮಾತಂತಿರಲಿ, ಇಂದ್ರಾದಿ ದೇವತೆಗಳ ಮಾತೂ ಹಾಗಿರಲಿ, ಆರ್ಯರಿಗೆಲ್ಲಾ ಪರಮಪೂಜ್ಯರಾದ, ಸೃಷ್ಟಿಕರ್ತರಾದ, ಬ್ರಹ್ಮದೇವರಿಗೂ ದೈತ್ಯರ ಕಾಟ ತಪ್ಪಲಿಲ್ಲನೆಂದ ಮೇಲೆ ಮನುಷ್ಯಮಾತ್ರದವರಿಗಾದರೂ ತಪ್ಪುವುದು ಹೇಗೆ? ಪರಂತು, ಭಗವದ್ಭಕ್ತರಿಗೆ ಕಷ್ಟವೆಂದರೆ, ಪ್ರಾಪಂಚಿಕ ಸೌಖ್ಯಗಳಿಗೆ ಅಡಚಣಿಗಳೊದಗಿದಲ್ಲಿ ಅದನ್ನವರು ಕಷ್ಟವೆಂದೆಣಿಸರು. ಹಾಗಾದರೆ ಅವರಿಗೆ ಕಷ್ಟವಾವುದೆಂದರೆ, ಪರಮಾತ್ಮನ ಪೂಜಾಕ್ಕೂ, ಪಾರತ್ರಿಕ ಸಾಧನಕ್ಕೂ ವಿಘ್ನಗಳು ಬರುವ ಪ್ರಸಂಗ ಒದಗಿದರೆ ಮಾತ್ರ ಆಗ ಆ ಮಹಾತ್ಮರುಗಳಿಗೆ ಮನಸ್ಸಿಗೆ ಖೇದವಾಗುವುದು. ಪಾರತ್ರಿಕ ಸಾಧನಕ್ಕೂ, ಭಗವದ್ಜ್ಞಾನಕ್ಕೂ ಮುಖ್ಯವಾದ ಕಾರಣವಾವುದೆಂದರೆ—ಸ್ವಧರ್ಮಾನುಷ್ಠಾನ; ಇಂತಹ ಸ್ವಧರ್ಮಾಚರಣೆಗೆ ಕಾರಣವಾವುದು? ಶಾಸ್ತ್ರ. ಇಂತಹ ಸಚ್ಛಾಸ್ತ್ರ ಸದ್ಧರ್ಮಗಳಿಗೇ ದೈತ್ಯರು ಕಂಟಕರಾಗುತ್ತಾರೆ, ಆದಮಾತ್ರಕ್ಕೇನು ಶ್ರೀಹರಿಯು ಭಯಕೃದ್ಭಯನಾಶನನಾದುದರಿಂದ ಸಜ್ಜನರ ಸ್ವಧರ್ಮಕ್ಕೆ ಅಪಜಯವಾಗಲು ಎಂದಿಗೂ ಬಿಡುವುದಿಲ್ಲ, ರಕ್ಷಿಸಿಯೇ ರಕ್ಷಿಸು

ವನು. ಪರಂತು, ನಮ್ಮ ಪೂರ್ವಜರಾದ ಆರ್ಯರು ಮಾತ್ರ ಶ್ರೀಹರಿಯು ರಕ್ಷಿಸುವನೆಂಬುವ ವಿಷಯದಲ್ಲಿ ದೃಢವಾದ ನಂಬಿಕೆಯುಳ್ಳವರಾಗಿ ಎಂತಹ ಅನಘಡಪ್ರಸಂಗ ಒದಗಿದರೂ ಬಹು ಕಷ್ಟದಿಂದ ತಮ್ಮ ಧರ್ಮದಲ್ಲಿ ತಾವು ಹಿಂಜರಿಯದೆ ಶ್ರೀಹರಿಯನ್ನೇ ಆರಾಧಿಸುತ್ತ, ಬಂದ ವಿಪತ್ತಿನಿಂದ ಪಾರಾಗುತ್ತಿದ್ದರು. ಕಷ್ಟವೆಂಬುದು ನಮಗೆ ಮಾತ್ರವಲ್ಲ; ಯಾವ ಕಾಲದಲ್ಲಿಯೂ ಉಂಟೇ ಉಂಟೆಂಬುದು ಸಿದ್ಧ. ಆದರೆ ನಮಗೂ ನಮ್ಮಾರ್ಯರಿಗೂ ಇರತಕ್ಕ ವೈಲಕ್ಷ್ಯಣ್ಯವೇನೆಂದರೆ—ಅವರಿಗೆ ಶ್ರೀದೇವರಲ್ಲಿ ನಂಬಿಕೆಯು ದೃಢವಾಗಿದ್ದಿತು. ನಮಗಾದರೋ ಬರಬರುತ್ತ ನಮ್ಮ ಮನಸ್ಸಿನಲ್ಲಿ ಆ ಶಕ್ತಿಯೇ ಕಡಿಮೆಯಾಗುತ್ತ ಬರುತ್ತಿದೆ. ದೈತ್ಯರಿಂದುಂಟಾದ ಕಷ್ಟಗಳೆಂತಹುದೆಂಬುದನ್ನು ವಿಚಾರಮಾಡೋಣ; ಜಗತ್ತಿಗೇ ಪೂಜ್ಯರಾದ ಪಿತಾಮಹರಿಗೂ ಮಧುಕೈಟಭರ ಕಾಟ ತಪ್ಪಲಿಲ್ಲ. ಇವರು ಕಾಡಿಸಿದುದಾದರೂ ಹೇಗೆಂದರೆ, ಸಕಲ ಶಾಸ್ತ್ರಕ್ಕೂ ಆಧಾರಭೂತವಾದುದು ಶಾಸ್ತ್ರಕ್ಕೇನು, ಈಶ್ವರ ಜ್ಞಾನಕ್ಕೇ ಆಧಾರಭೂತವಾದುದು ವೇದ. ವೇದದಿಂದಲೇ ಆರ್ಯಮತದ ಚಳವಳ. ಇದನ್ನು ತಿಳಿದ ಆ ದುಷ್ಟದೈತ್ಯರು, ಸರ್ವಸಾಧನಕ್ಕಾಧಾರವಾದ ಇಂತಹ ವೇದವನ್ನೇ ಕದ್ದೊಯ್ದರು. ಪಾಠಕ ಮಹಾಶಯರೇ, ವೇದವನ್ನೇ ಕದ್ದೊಯ್ದರೆಂಬುವ ವಿಷಯದಲ್ಲಿ, ಬೇಕಾದಷ್ಟು ಆಕ್ಷೇಪಿಸಬಹುದು —ವೇದ—ವೇದವೆಂದರೇನು ಪುಸ್ತಕವೇ ಅಥವಾ, ಯಾರಿಗಾದರೂ ವಶವಾಗತಕ್ಕ ವಸ್ತುವೆ, ಹೀಗಿರಲು ಇಂತಹ ವೇದ—ಅಪೌರುಷೇಯವಾದ—ವೇದ—ವೇದವನ್ನು ಕದ್ದೊಯ್ದರೆಂಬುದಾದರೂ ಹೇಗೆ, ಎಂಬುವ ವಿಷಯವಿಮರ್ಶೆಗಾಗಿ ಬರೆಯಲಾರಂಭಿಸಲು ಇದೇ ಒಂದು ದೊಡ್ಡ ಗ್ರಂಥವಾದೀತು, ಹಾಗೂ ಬರೆದರೂ ಒಪ್ಪದಿರುವವರನ್ನು ಒಪ್ಪಿಸಲು ಸಾಧ್ಯವಿಲ್ಲವು. ಆದುದರಿಂದ ಪೂರ್ವಜರ ವಚನ ಪ್ರಾಮಾಣ್ಯಗಿಂದ ವೇದವನ್ನು ಕದ್ದೊಯ್ದರೆಂಬುದು ನಿಜವೆಂದು ನಂಬಿ ಪ್ರಕೃತ ಉದ್ದೇಶ್ಯ ವಿಷಯದಲ್ಲಿ ಮುಂದುವರಿಯುವ. ವೇದವೇ ಇಲ್ಲದಿರಲು ಮುಂದೆ ಗತಿಯೇನೆಂದು ಸಜ್ಜನರ ಉದ್ಧಾರ ಬುದ್ಧಿಯಿಂದ ಚತುರ್ಮುಖನು ಶ್ರೀಹರಿಯನ್ನು ಮೊರೆಯಿಡುತ್ತಿರಲು ನಿಜ ಭಕ್ತನಾದ ಚತು

ಮೂರ್ಖನ ಮೊರೆಯನ್ನು ಕೇಳಿ ಶ್ರೀಹರಿಯು ಉದ್ಧರಿಸಿದುದೇನೋ ನಿಜ. ಆದರೆ, ಮತ್ಸ್ಯಾವತಾರದಿಂದಲೆಂಬುದಾಗಿಯೂ, ಹಯಗ್ರೀವಾವತಾರದಿಂದಲೆಂಬುದಾಗಿಯೂ ಎರಡು ವಿಧಗಳಿರುವುವು, ಹೇಗೂ ಆಗಲಿ, ಮೊದಲನೆಯದಾದರೋ ತಿರ್ಯಗ್ಜಂತು ವರ್ಗವು, ಎರಡನೆಯದಾದರೋ ಚತುಷ್ಪಾದಪ್ರಾಣಿವರ್ಗವು, ಈ ಎರಡೂ, ಸಾಮಾನ್ಯ ಮನುಷ್ಯಮಾತ್ರದವರಿಗೂ ಹೇಯವೆಂದು ಕಂಡುಬರುವ ಈ ರೂಪವನ್ನು ಧರ್ಮೋದ್ಧಾರಕ್ಕಾಗಿ ಧರಿಸಿ. ಉದ್ಧರಿಸಿದನು. ನಾಸ್ತಿಕರಾದವರಿಗೆ ಮಾತ್ರ, ಈ ರೂಪುಗಳೆಂದರೆ, ಪರಿಹಾಸಕ್ಕಾಸ್ಪದವಾಗಬಹುದು, ಸರ್ವಸ್ವರೂಪಿಯಾದ, ಸರ್ವಸ್ವತಂತ್ರನಾದ ಶ್ರೀಹರಿಯು ಯಾವರೂಪದಿಂದವತರಿಸಿದನೆಂದರೂ ಶ್ರೀಹರಿಯ ಮಹಿಮೆಗೇನೂ ಕುಂದುಕವಿಯಲಿಲ್ಲವು. ಮಾತ್ರವಲ್ಲ ಸ್ವಾಮಿಭಕ್ತರಾದವರಿಗೆ ಈ ಕಾರಣದಿಂದ ಶ್ರೀಹರಿಯಲ್ಲಿ ಅಗೌರವಬುದ್ಧಿಯೂ ಅಂಕುರಿಸಲಾರದು, ಆಸ್ತಿಕರಿಗೋಸ್ಕರನೇ ವಿಜ್ಞಾಪಿಸುವ ವಿಷಯಗಳಾದುದರಿಂದ ಈಗ ನಮಗೆ ಇಲ್ಲಿ ನಾಸ್ತಿಕರ ಪ್ರಶ್ನೋತ್ತರಗಳ ಪ್ರಶಂಸೆಯು ಬೇಡ. ಶ್ರೀಹರಿಯು ಮಧುಕೈಟಭರನ್ನು ನಿಗ್ರಹಿಸಿ ವೇದವನುದ್ಧರಿಸಿ ಪಿತಾಮಹರಿಗೆ ತಂದಿತ್ತು ಧರ್ಮಸ್ಥಾಪನೆಯನ್ನು ಮಾಡಿದನು. ಮಧುಕೈಟಭರ ಹಾವಳಿಯು ಮುಗಿದಿತು.

॥ ಶ್ರೀಉಪೇಂದ್ರಾಯ ನಮಃ ॥

ಕೃತಯುಗ.

ವೃತ್ರಾಸುರ — ವೃತ್ರಾಸುರನ ಹಾವಳಿಯಾರಂಭವಾಯಿತು— ವೃತ್ರಾಸುರನ ದೆಸೆಯಿಂದ ಇಂದ್ರಾದಿ ದೇವತೆಗಳೇ ಮೊದಲುಗೊಂಡು ಮನುಷ್ಯೋತ್ತಮರ ವರಿವಿಗೂ ಎಷ್ಟು ಕಷ್ಟಬಂದಿತೆಂಬ ವಿಷಯಗಳನ್ನು ಬರೆದು ಪೂರೈಸದು. ಇಂತಹ ದುರ್ಘಟಪ್ರಸಂಗದಲ್ಲಿ ದೇವತೆಗಳು ಮೊರೆಯಿಡಲು ಆಗ ಶ್ರೀಹರಿಯು ಪ್ರಸನ್ನನಾಗಿ, ಪುಣ್ಯಭೂಮಿ ನಿವಾಸಿಗಳಾದ, ಭಾರತೀಯರಲ್ಲಿ ಧರ್ಮರಕ್ಷಣೆಯ ವಿಷಯದಲ್ಲಿ, ಬದ್ಧದೀಕ್ಷೆಯುಳ್ಳವರಾರಾದರೂ ಇದ್ದರೆ, ಆ ಪುಣ್ಯಾತ್ಮರಿಂದ ಈ ದುಷ್ಟನ ನಿಗ್ರಹವಾಗಬೇಕಲ್ಲದೆ ಬೇರೆ ಉಪಾಯವಿಲ್ಲವೆಂದು ಸೂಚಿಸಿದನು. ಏತಕ್ಕೆಂದರೆ, ಈ ದುಷ್ಟನು

ಯಾವ ಕಾರಣದಿಂದಲೂ, ಯಾರಿಂದಲೂ ಯಾವ ವಸ್ತುವಿನಿಂದಲೂ ತನಗೆ ಮರಣವೇ ಬರಕೂಡದೆಂದು ವರವನ್ನು ಪಡೆದಿದ್ದನು. ಆದರೆ, ಭಾರತೀಯರೆಂದರೆ ಮನುಷ್ಯ ಮಾತ್ರದ ಹೇಡಿಗಳೆಂದು ನಿರ್ಲಕ್ಷಿಸಿದ್ದನು. ಹಾಗೂ ಮನುಷ್ಯರಿಂದಲೂ ಮರಣವಾಗಕೂಡದೆಂಬ ವರವನ್ನೇನೋ ಸಂಪಾದಿಸಿದ್ದನಾದರೂ, ಈ ಭಾರತೀಯರ ಅಸ್ತಿಮಾತ್ರದಿಂದ ತನ್ನ ಮರಣವಾದೀತೆಂಬುವಷ್ಟು ಊಹಿಸದವನಾಗಿ ಇದೊಂದು ವರವನ್ನು ಮಾತ್ರ ಮರೆತವನಾಗಿದ್ದನಾದುದರಿಂದ ಶ್ರೀಹರಿಯು ದೇವತೆಗಳಿಗೆ ಈ ವಿಚಾರವನ್ನು ತಿಳುಹಿಸಲು ಶ್ರೀಹರಿಯ ಆಜ್ಞೆಯಂತೆಯೇ ಭಾರತೀಯರನ್ನರಸಿಕೊಳ್ಳುತ್ತಾ ಸುರಪತಿಯು ಬರುತ್ತಿರಲು, ಓರ್ವ ಮಹರ್ಷಿಗಳು, ಎಂದರೆ, ದಧೀಚಿ ಋುಷಿಗಳನ್ನು ಕಂಡು ವಿಜ್ಞಾಪಿಸಿಕೊಳ್ಳಲು ಈ ತಪಸ್ವಿಗಳಾದರೋ ಧರ್ಮೋದ್ಧಾರಕ್ಕಾಗಿ ದೇಹಾಭಿಮಾನವನ್ನೇ ತೊರೆದು ತನು, ಮನ, ಧನಗಳನ್ನರ್ಪಣ ಮಾಡುವ ಸ್ವಾರ್ಥತ್ಯಾಗ ಬುದ್ಧಿಯುಳ್ಳ ಈ ಮಹನೀಯರು ಸಿದ್ಧರಾಗಿರಲು, ಇವರ ಬೆನ್ನ(ಅಸ್ಥಿ)ಎಲುಬಿನಿಂದ ವಜ್ರಾಯುಧವನ್ನು ಮಾಡಿ ಇಂದ್ರನು ಆ ವಜ್ರಾಯುಧದಿಂದ ವೃತ್ರಾಸುರನನ್ನು ಸಂಹರಿಸಿ, ವೃತ್ರಾರಿಯೆಂಬುವ ಕೀರ್ತಿಯನ್ನು ಪಡೆದನು. ಹೀಗೆ ಶ್ರೀಹರಿಯು ತನ್ನ ಭಕ್ತರಿಂದ ಧರ್ಮಸ್ಥಾಪನೆಯನ್ನು ಮಾಡಿಸಿದನು. ದಧೀಚಿ ಮಹರ್ಷಿಗಳ ಔದಾರ್ಯವೆಂದರಲ್ಲವೆ ಔದಾರ್ಯ, ಎಂತಹ ಸ್ವಾರ್ಥತ್ಯಾಗ, ಧರ್ಮರಕ್ಷಣೆಗೂ, ದೇಶೋನ್ನತಿಗೂ, ದೇಹಾಭಿಮಾನವನ್ನೂ ತೊರೆದು ಆತ್ಮಾರ್ಪಣ ಮಾಡಿದರಲ್ಲಾ, ಇದೀಗ ಸ್ವಾರ್ಥತ್ಯಾಗ. ಮಾತ್ರವಲ್ಲ, ನಿಜವಾಗಿಯೂ ವೃತ್ರಾಸುರನ ಸಂಹಾರಕಾರ್ಯವು ದಧೀಚಿ ಮಹರ್ಷಿಗಳಿಂದಲೇ ನಡೆದುದೆಂಬುದರಲ್ಲಿ ಸಂಶಯ ಉಂಟೆ? ಹೀಗಿದ್ದರೂ, ಕಾರ್ಯವನ್ನು ಈಡೇರಿಸುವುದರಲ್ಲಿ ಮಾತ್ರ ತಾವು ಮುಂದಾಳುಗಳಾಗಿ ಕೀರ್ತಿಗೆ ತಾವು ಭಾಗಿಗಳಾಗದೆ ವೃತ್ರಾರಿ ಎಂಬುವ ಕೀರ್ತಿಯನ್ನು ಸುರಪತಿಯ ಪಾಲಿಗೆ ಬಿಟ್ಟಿರುವರಲ್ಲಾ ಇದೀಗ ಸ್ವಾರ್ಥತ್ಯಾಗದ ಮಹತ್ವದ ನಿದರ್ಶನವು. ಈ ಮಹನೀಯರನ್ನೇ ಸ್ವಾರ್ಥತ್ಯಾಗಿಗಳೆನ್ನಬೇಕು. ಹೀಗಲ್ಲದೆ, ಆಧುನಿಕರಲ್ಲಿ ಕೆಲವರಂತೆ.(ಹೇಳುವುದು ಶಾಸ್ತ್ರ ಹಾಕುವುದು ಗಾಳ) ಎಂಬ

ಹಾಗೆ, ಸ್ವಾರ್ಥತ್ಯಾಗ, ಸ್ವಾರ್ಥತ್ಯಾಗವೆಂದು ಒಬ್ಬರಿಗೊಬ್ಬರು, ಉಪನ್ಯಾಸ, ಉಪದೇಶಗಳಲ್ಲಿಯೇ ಮುಗಿಸುತ್ತಾ ಬಂದರೆ ಸ್ವಾರ್ಥತ್ಯಾಗವಾಗಲಾರದು. ಬಾಯಿಯಲ್ಲಿ ಮಾತ್ರ ಪ್ರತಿಯೊಬ್ಬರೂ ಧರ್ಮವೇ ಕೆಟ್ಟುಹೋಯಿತು, ಧರ್ಮವೇ ಕೆಟ್ಟುಹೋಯಿತು ಎಂಬುದಾಗಿ ಹೇಳುತ್ತಿರುವರಲ್ಲದೆ ಉಪದೇಶಿಸುವಂತೆ ಸ್ವತಃ ಆಚರಿಸಿ ಮಾರ್ಗದರ್ಶಿಗಳಾಗತಕ್ಕವರಾದರೋ ಒಬ್ಬರೂ ಇಲ್ಲವೆನ್ನಬಹುದು, ಹಾಗಿಲ್ಲದಿದ್ದರೂ ಅತಿ ವಿರಳವೆಂಬುದರಲ್ಲಿ ಸಂಶಯವಿಲ್ಲ. ಹೀಗಾಗಲು ಧರ್ಮದ ಪ್ರಚಾರವಾಗುವುದಾದರೂ ಹೇಗಾದೀತು. ಆಧುನಿಕರ ಧರ್ಮಪ್ರಸಂಗಕ್ಕೆ ಕೊನೆಯ ಪರಿಹಾರವೇನೆಂದರೆ—ಎಷ್ಟೇ ಅಡಚಣೆಗಳು ಬಂದರೂ ಧರ್ಮವನ್ನು ನಡಿಸಿಯೇ ತೀರಬೇಕೆಂಬ ಸಿದ್ಧಾಂತವಲ್ಲ, ಕಲಿಗಾಲ, ಕಾಲದ ಮಹಿಮೆ, ಅಯ್ಯೋ ಪಾಪ, ನಡೆಯುತ್ತಾ ಇದೆ, ಇದೊಂದು ಬಗೆಯ ಪರಿಹಾರ, ಆಯಾಯ ಕಾಲದಲ್ಲಿ ನಡೆಯುವುದೆಲ್ಲಾ ನಡೆದೇ ನಡೆಯಬೇಕು, ಇದೊಂದು ಬಗೆಯ ಸಮಾಧಾನ. ಈಶ್ವರೇಚ್ಛೆಯೇ ಹೀಗಿದೆ, ಮಾಡತಕ್ಕದ್ದೇನು, ಇದೊಂದು ಬಗೆಯ ವೇದಾಂತ. ಈ ವಿಧವಿಧವಾದ ಔಪಚಾರಿಕ ಉಪನ್ಯಾಸ, ಶುಷ್ಕಪಶ್ಚಾತ್ತಾಪ, ಹೇಡಿತನದ ವೇದಾಂತ ಇವುಗಳಿಂದ ಕಾರ್ಯಸಾಧನೆಯಾದರೂ ಎಂದೂ ಆಗಲಾರದು. ಅಸ್ತು, ವೃತ್ರಾಸುರನ ಹಾವಳಿ ಮುಗಿಯಿತು.

॥ ಶ್ರೀಪ್ರದ್ಯುಮ್ನಾಯ ನಮಃ ॥

ಎರಡನೆಯ ತರಂಗ

ಗೊಂದಲದ ಮೇಲೆ ಗೊಂದಲ, ತಾರಕಾದಿ ರಾಕ್ಷಸರುಗಳ ಕಾಟ.

ಈ ದುಷ್ಟರು ಪರಬಲದಿಂದ ಪ್ರಪಂಚವನ್ನೇ ಅಲ್ಲೋಲಕಲ್ಲೋಲ ಮಾಡುವಷ್ಟು ಬಾಂಠಿಗರಾಗಿ ಕಾಡ ಹತ್ತಿದರು. ಆಗ ಧರ್ಮರಕ್ಷಣೆಗಾಗಿ ಪುನಃ ದೇವತೆಗಳು ಶ್ರೀಹರಿಯನ್ನು ಪ್ರಾರ್ಥಿಸಲು, ಶ್ರೀವಿಷ್ಣುವು ರುದ್ರದೇವರಿಂದ ಈ ಕಾರ್ಯವಾಗಬೇಕೆಂದು ಅಪ್ಪಣೆಯನ್ನಿತ್ತನು. ರುದ್ರದೇವರಿಂದಲಾದರೂ ಆಗತಕ್ಕದ್ದು ಹೇಗೆ, ಪರ್ವತರಾಜನ ಪುತ್ರಿ

ಯಾದ ಪಾರ್ವತಿಯನ್ನು ವಿವಾಹ ಮಾಡಿಕೊಂಡು, ಕುಮಾರನನ್ನು ಪಡೆದು ಷಣ್ಮುಖನಿಂದ ಈ ತಾರಕಾದಿ ದುಷ್ಟರ ಸಂಹಾರವನ್ನು ಮಾಡಿಸಬೇಕು. ಈ ಸಂದರ್ಭದಲ್ಲಿ ರುದ್ರದೇವರಾದರೋ ತಪಶ್ಚರ್ಯೆಯಲ್ಲಿರುವುದರಿಂದ ಅವರಿಗೆ ಬಹಿಃ ಪ್ರಪಂಚದಲ್ಲಿ ದೃಷ್ಟಿಯುಂಟಾಗುವುದು ಹೇಗೆ, 'ಪಾರ್ವತಿಯ ವಿವಾಹವಾಗುವುದಾದರೂ ಹೇಗೆ, ಈ ಕಾರ್ಯಸಾಧನೆಯು ಯಾರಿಂದ ಲಾದೀತು, ರುದ್ರದೇವರ ಮನಸ್ಸನ್ನು ತಿರುಗಿಸುವ ಸಮರ್ಥರಾದರೂ ಯಾರಿರುವರು, ಇವೇ ಮುಂತಾದ ಯೋಚನೆಯಿಂದ ದೇವತೆಗಳು ದಿಕ್ತೋಚದವರಾಗಿರಲು ಬ್ರಹ್ಮಮಾನಸ ಪುತ್ರರಾದ ನಾರದರು ದೇವತೆಗಳಿಗೆ ಹೀಗೆಂದು ಸೂಚಿಸಿದರು. ಎಲೌ ದೇವತೆಗಳಿರಾ! ನೀವುಗಳು ಈಗ ಆಲೋಚಿಸುತ್ತಿರುವ ಕಾರ್ಯಸಾಧನೆಯಾಗಬೇಕಾದರೆ ವಿಷ್ಣುಪುತ್ರನಾದ ಮನ್ಮಥನಿಂದ ಆಗುವುದೆಂದು ತಿಳಿಯಿರಿ, ಅದು ಹೇಗೆಂದರೆ. ಮನ್ಮಥನ ಸುಮಬಾಣಕ್ಕಾದರೋ ಎಂತಹರ ಮನಸ್ಸನ್ನಾದರೂ ಕಲಕಿಬಿಡುವಷ್ಟು ಶಕ್ತಿಯು ಇರುವುದಾದುದರಿಂದ ಮನ್ಮಥನು ಮಹಾದೇವನ ಮನಸ್ಸಿನ ಮೇಲೆ ಸುಮಬಾಣವನ್ನೆಸೆಯಲು ಆಗ ಮಹಾದೇವನು ಬಹಿರ್ಮುಖನಾಗಿಯೇ ಆಗುವನು. ಆ ಸಮಯದಲ್ಲಿ ನಾವುಗಳೆಲ್ಲರೂ ಪರ್ವತರಾಜನ ಸಹಿತ ಪಾರ್ವತಿಯನ್ನು ಕರೆತಂದು ಸಿದ್ಧರಿದ್ದು ಗಿರಿಜೆಯನ್ನು ಪರಿಗ್ರಹಿಸುವಂತೆ ಮಹಾದೇವನನ್ನು, ಪ್ರಾರ್ಥಿಸಲು ನಮ್ಮೆಲ್ಲರ ಪ್ರಾರ್ಥನೆಯನ್ನು ಪಾಲಿಸಿ ಗಿರಿಜಾಕಲ್ಯಾಣ ಮಹೋತ್ಸವವನ್ನು ನಡೆಯಿಸಿಯೇ ನಡೆಯಿಸುವನು. ನಂತರ ಮುಂದಿನ ಮಂಗಳ ಕಾರ್ಯಗಳೆಲ್ಲವೂ ತನಗೆ ತಾನಾಗಿಯೇ ಆಗುವುದೆಂದು ಸೂಚಿಸಿದ ನಾರದರ ಸೂಚನೆಯನ್ನು ದೇವತೆಗಳು ಮನ್ಮಥನಿಗೆ ತಿಳುಹಿಸಲು, ಮನ್ಮಥನು ಭಗವದ್ಭಕ್ತರಿಗೆ ಹಿತವಾಗಿ, ರಾಷ್ಟ್ರೋದ್ಧಾರ, ಧರ್ಮೋದ್ಧಾರ, ಇವೇ ಮೊದಲಾದ ಮಹತ್ಕಾರ್ಯಗಳು ತನ್ನಿಂದ ನಡೆಯುವುದಾದರೆ ತಾನು ಧನ್ಯನೆಂದು ಬಹುವಾಗಿ ಮನಸ್ಸಿನಲ್ಲಿ ಸಂತೋಷಪಡುತ್ತಾ ದೇವತೆಗಳಿಗೆ ಹಿತವಾದ, ಈ ರಾಷ್ಟ್ರೋದ್ಧಾರ ಕಾರ್ಯವನ್ನು ಅತ್ಯವಸರದಿಂದ ನಡೆಯಿಸಲು ತಾನು ಸಿದ್ಧನಿರುತ್ತೇನೆಂದು ಒಪ್ಪಿಕೊಂಡನು. ಅಂತೆ, ರತಿಪತಿಯು ತಪಶ್ಚರ್ಯನಿರತನಾದ ಮಹಾದೇವನ

ಮೇಲೆ, ಸುಮಶರವನ್ನು ಪ್ರಯೋಗಿಸಲು ಕುಸುಮಾಸ್ತ್ರವು ಮನೋಭಿಮಾನಿಯಾದ ಮಹಾದೇವನ ಮನಸ್ಸನ್ನೂ ಕೂಡ ಕಲಕಲಾರಂಭಿಸಿತು, ಕಲಕಲಾರಂಭಿಸುವುದೇನು? ಬಹಿರ್ಮುಖನನ್ನಾಗಿಯೇ ಮಾಡಿತು. ಮಹಾದೇವನು ಕ್ರೋಧದಿಂದ ತನ್ನ ತಪಸ್ಸಿಗೆ ವಿಘ್ನಕಾರಿ ಯಾರೆಂದು ಕಣ್ಣು ಬಿಡಲು ಆ ಮಹಾದೇವನ ಫಾಲಾಗ್ನಿಗೆ ಸಿಕ್ಕಿದ ಮನ್ಮಥನ ಬವಣೆಯನ್ನಾದರೂ ಏನು ಹೇಳೋಣ, ಫಾಲಾಗ್ನಿಯಿಂದ ಪಾರಾಗುವುದುಂಟೆ, ದಹಿಸಿಯೇ ಹೋದನು. ಹ್ಯಾ ಹ್ಯಾ ಎಂತಹ ಪ್ರಮಾದ, ಪಾತಕ ಮಹಾಶಯರೇ! ಪ್ರಪಂಚದ, ಪುರುಷರಲ್ಲಿ ಕಾಮದೇವನಿಗಿಂತಲೂ ಸುಂದರರ್ರುಂಟೆ, ಯಾವ ಸುಂದರ ಪುರುಷನನ್ನೂ ಕಾಮದೇವನಿಗೆ ಹೋಲಿಸಬೇಕಲ್ಲದೆ ಕಾಮದೇವನನ್ನು ಹೋಲಿಸುವ ಮತ್ತೋರ್ವ ಸುಂದರನುಂಟೆ, ಈತನಂತೆಯೆ, ಈತನ ಪತ್ನಿಯಾದರೂ ಸ್ತ್ರೀಯರಲ್ಲೆಲ್ಲಾ ಅಸದೃಶ ಚಲುವೆಯಾದ ರತಿದೇವಿಯು. ಈ ಬಗೆಯ ದಾಂಪತ್ಯಾನುಕೂಲದ ಸಾಂಸಾರಿಕನಾದ ತರುಣನಾದ ಕಾಮದೇವನು ಈಶ್ವರನ ಫಾಲಾಗ್ನಿಯ ಪಾಲಾಗುವಾಗಲೂ ತನ್ನ ಸಂಸಾರ, ತನ್ನ ಪತ್ನಿ, ತನ್ನ ದೇಹ, ಇವೇ ಮೊದಲಾದ ಯಾವ ಸುಖದ ಕಡೆಗೂ ಲಕ್ಷ್ಯಕೊಡದೆ, ಧರ್ಮೋದ್ಧಾರಕ್ಕಾಗಿ ತನ್ನ ದೇಹವು ವಿನಿಯೋಗವಾದೀತೆಂದು ಸಂತೋಷಪೂರ್ವಕವಾಗಿ ಅರ್ಪಿಸಿದನು. ಸ್ವಾರ್ಥತ್ಯಾಗವೆಂದರೆ ಕಾಮದೇವನ ಸ್ವಾರ್ಥತ್ಯಾಗ, ಇದೀಗ ಸ್ವಾರ್ಥತ್ಯಾಗವು, ಇಂತಹ ಶುದ್ಧಾಂತಃಕರಣವುಳ್ಳವರಿಂದಲೇ ಧರ್ಮೋದ್ಧಾರವಾಗುವುದಲ್ಲದೆ(ಕಂಡವರ ಮಕ್ಕಳನ್ನು ಬಾವಿಗೆ ದೂಡಿ ಉಂಡಾಡೀಭಟ್ಟನು ನೆಲೆ ನೋಡಿದ)ಎಂಬಂತೆ, ಸ್ವಾರ್ಥತ್ಯಾಗದ ಉಪನ್ಯಾಸವನ್ನೆಲ್ಲಾ ಕಂಡವರಿಗಾಗಿಯೇ ಮಾಡುತ್ತ ತಾವು ಮಾತ್ರ ಸ್ವಾರ್ಥಪರರಾಗಿರುವ ಛದ್ಮವೇಷಧಾರಿಗಳಿಂದಲಾದರೂ ಧರ್ಮೋದ್ಧಾರವಾದೀತೆ, ಅಸ್ತು ರತಿದೇವಿಯು ಪತಿಭಕ್ತಿಯ ವಿಚಾರವನ್ನು ತಿಳಿದುಕೊಳ್ಳೋಣ. ಈಶ್ವರನ ಫಾಲಾಗ್ನಿಗೆ ತುತ್ತಾದ ತನ್ನ ಪತಿಗಾಗಿ ರತಿದೇವಿಯು, ಪತಿಭಿಕ್ಷೆಯನ್ನು ಕರುಣಿಸಬೇಕಾಗಿ ನಿಜಭಕ್ತಿಯಿಂದ, ಮಹಾದೇವನನ್ನು ಪ್ರಾರ್ಥಿಸುತ್ತಿರಲು ಪ್ರಸನ್ನನಾಗಿ, ಕಾಮದೇವನ ಸ್ವಾರ್ಥತ್ಯಾಗವನ್ನೂ ಧರ್ಮೋದ್ಧಾರಕ್ಕಾಗಿ

ಆತ್ಮಾರ್ಪಣವನ್ನೇ ಮಾಡಿದ ಔದಾರ್ಯವನ್ನೂ, ರತಿದೇವಿಯ ಪತಿಭಕ್ತಿಯನ್ನೂ ಕಂಡು ಸಂತುಷ್ಟನಾಗಿ, ಇವೆಲ್ಲದಕ್ಕೂ ಮೇಲಾಗಿ ಧರ್ಮಮಾರ್ಗಾವಲಂಬಿಗಳಿಗೆ ಅಪಜಯವಾಗುವುದೆಂಬ ಅನಿಷ್ಟ ದುಶ್ಶಬ್ದವೇನಾದರೂ ಉಳಿಯಲು ಮುಂದೆ ಬರಬರುತ್ತ ಧರ್ಮವೇ ನಿಂತುಹೋದೀತೆಂಬುವುದರಿಂದ ಮಹಾ ಕರುಣಾಳುವಾದ ಮಹಾದೇವನು, ಹೀಗೆಂದು ವರವನ್ನಿತ್ತು ಅನುಗ್ರಹಿಸಿದನು. ಎಲೌ ರತಿದೇವಿಯೇ, ನಿನ್ನ ಪ್ರಾರ್ಥನೆಯಂತೆ ನಿನಗೆ ಪತಿಭಿಕ್ಷೆಯನ್ನಿತ್ತಿರುವೆನು, ಮುಂದೆ ಶಂಬರಾಸುರನೆಂಬ ಅಸುರನ ಅಧೀನದಲ್ಲಿ ಕಾರಣಾಂತರದಿಂದ ನೀನು ಇರಬೇಕಾದ ಸಂದರ್ಭವು ಒದಗುವುದು, ಆಗ ನಿನ್ನ ಪತಿಯು ಪ್ರದ್ಯುಮ್ನ ರೂಪಧಿಂದ ನಿನಗೆ ಲಭಿಸುವನಲ್ಲದೆ ಶಂಬರಾಸುರನ ವಧೆಯನ್ನು ಕೂಡಾ ಮಾಡಿ, ಧರ್ಮವನ್ನು ಸ್ಥಾಪಿಸಿ, ಶಂಬರಾರಿ ಎಂಬ ಕೀರ್ತಿಯನ್ನು ಪಡೆಯುವನು, ನೀನು ಎಂದೆಂದಿಗೂ ಸುಮಂಗಲೆಯೆ ಆಗಿರುವೆ. ಎಂಬುದಾಗಿ ವರವನ್ನಿತ್ತನು. ಇತ್ತ, ಬಹಿರ್ಮುಖನಾದ ಮಹಾದೇವನನ್ನು ದೇವತೆಗಳು ಪಾರ್ವತಿಯ ಪರಿಣಯವನ್ನು ಕೈಕೊಳ್ಳುವಂತೆ ಪ್ರಾರ್ಥಿಸಲು, ದೇವತೆಗಳ ಇಷ್ಟಪ್ರದನಾದ ಮಹಾದೇವನು ಪಾರ್ವತಿಯನ್ನು ಪರಿಗ್ರಹಿಸಿದನು. ಕುಮಾರ ಸ್ವಾಮಿಯನ್ನು ಪಡೆದು, ಕುಮಾರನಿಂದ ತಾರಕಾದಿ ರಾಕ್ಷಸರ ಸಂಹಾರಕಾರ್ಯವನ್ನು ಮಾಡಿಸಿ ಧರ್ಮಸ್ಥಾಪನೆಯನ್ನು ಮಾಡಿಸಿದನು. ಹೀಗೆ ತಾರಕಾದಿಗಳ ಕಾಟ ಮುಗಿಯಿತು.

॥ ಲಕ್ಷ್ಮೀನರಸಿಹ್ಮಾಯ ನಮಃ ॥

ಮೂರನೆಯ ತರಂಗ.

ಮತ್ತೆ ಯಾರ ಹಾವಳಿ? ಹಿರಣ್ಯಾಕ್ಷ, ಹಿರಣ್ಯಕಶಿಪು—

ಇವರು ಲೋಕಕಂಟಕರಾದ ದುಷ್ಟದೈತ್ಯರು ಘೋರವಾದ ತಪಸ್ಸನ್ನಾಚರಿಸಿ ವರಗಳನ್ನು ಪಡೆದು, ಮಿತಿಮೀರಿದ ವರಬಲದಿಂದ ಗರ್ವಿಷ್ಠರಾಗಿ, ಭೂಮ್ಯಂತರಿಕ್ಷಗಳನ್ನೇ ತಿರುಮುರುವು ಮಾಡುವಷ್ಟು ಸಾಮರ್ಥ್ಯವುಳ್ಳವರಾಗಿ ದುಷ್ಟತನದಿಂದ ಉಪದ್ರವ ಕೊಡಹತ್ತಿದ್ದರು. ಹಿರಣ್ಯಾಕ್ಷನೆಂಬವನು ಭಗವದ್ವೇಷಿಯಾಗಿ, ಭಗವತ್ಪ್ರೀತಿಯಾಗತಕ್ಕ ಸ್ವಧ

ರ್ಮಕ್ಕೇ ಕಂಟಕನಾಗಿದ್ದನು. ದೇವತೆಗಳಲ್ಲಿಯೂ ಸಾಧುಗಳಲ್ಲಿಯೂ ಗೋವುಗಳಲ್ಲಿಯೂ ಬ್ರಾಹ್ಮಣರಲ್ಲಿಯೂ ದ್ವೇಷಿಸುತ್ತ ನಾನಾಬಗೆಯಿಂದ ಭಗವದ್ದ್ರೋಹವಾಗುವ ಪಾಪಕಾರ್ಯ ಮಾಡಹತ್ತಿದನು. ಈ ವಿಧವಾದ ಧರ್ಮವಿರೋಧಕಾರ್ಯದಿಂದಲಾದರೋ ವಾತಾವರಣವೇ ಕೆಟ್ಟು ಜನಗಳ ಮನಸ್ಸೇ ಕೆಟ್ಟುಹೋದೀತೆಂಬುದನ್ನು ಪುನಃ ಹೇಳಬೇಕಾದುದಿಲ್ಲ. ಇಷ್ಟೊತ್ಪತ್ತಿಯಾಗದೆ ಸರ್ವಕ್ಕೂ ಅಂದರೆ ಯಾವದೊಂದು ಸತ್ಕರ್ಮಕ್ಕೂ ಆಧಾರವಾದುದು ಭೂಮಿ. (ಪುಣ್ಯಭೂಮಿ ಎಂದರೆ ಭರತಖಂಡ,) ಇಂತಹ ಭೂಮಿ ಇದ್ದರಲ್ಲವೆ ಏನಾದರೂ ಸತ್ಕಾರ್ಯಗಳು ನಡೆಯಬೇಕೆಂದು ಯೋಚಿಸಿ ಈ ಭೂಮಿಯನ್ನೇ ನಾಶಗೊಳಿಸಬೇಕೆಂಬುವ ದುರಾಲೋಚನೆಯಿಂದ ಪ್ರಯತ್ನಪಟ್ಟನು. ವಾಚಕರೇ, ಭೂಮಿಯನ್ನು ಸುತ್ತಿ ಹಾರಿಸಿದನೆಂಬುದಾಗಿ ಒಂದು ಕಡೆಯಲ್ಲಿದೆ. ಮತ್ತೊಂದು ಕಡೆಯಲ್ಲಿ ಮಹಾಬಲಾಢ್ಯನಾದ ಹಿರಣ್ಯಾಕ್ಷನು ಈ ಭೂಮಿಯನ್ನು ತನ್ನ ಸಾಮರ್ಥ್ಯದಿಂದ ಪಾತಾಳದ ವರಿವಿಗೆ ತುಳಿದು ಕೆಳಕ್ಕಿಳುಹಿಸಿದನೆಂಬುದಾಗಿಯೂ ಇರುವುದು. ಚಾಪೆಯಂತೆ ಭೂಮಿಯನ್ನು ಸುರುಳಿ ಸುತ್ತಿದನೆಂಬುವುದು ಶಾಸ್ತ್ರಸಮ್ಮತವಾದರೂ, ಆ ವಿಷಯವನ್ನು ನಂಬುವಂತೆ ವಿವರಿಸುವುದು ಅಸಾಧ್ಯವಾದುದರಿಂದ ಎರಡನೆಯದಾದ ತುಳಿದು ಕೆಳಕ್ಕಿಳುಹಿಸಿದನೆಂಬುದನ್ನು ನಂಬಬಹುದು. ಹಾಗಾದರೆ ಈ ಭೂಮಿಯನ್ನೇ ಪಾತಾಳಕ್ಕಿಳಿಸಿದನೆಂದರೆ ಪುನಃ ಭೂಮಿಯು ಉದ್ಧಾರವಾಗುವವರಿವಿಗೂ ಜನಗಳೆಲ್ಲಿದ್ದರೆಂಬನುಮಾನವಲ್ಲವೆ, ಆದಕ್ಕಾಗಿಯೇ ತುಳಿತು ಕೆಳಗಿಳಿಸಿದನೆಂಬುವುದು ಸುಲಭದಿಂದ ಒಪ್ಪತಕ್ಕದ್ದಾಗಿರುತ್ತದೆ. ಭೂಮಿಯನ್ನು ಪಾತಾಳಕ್ಕೊಯ್ಯುವಾಗ ಇಲ್ಲಿರುತ್ತಿದ್ದವರಲ್ಲಿ ಕೆಲವರು ಅಂದರೆ ಊರ್ಧ್ವಲೋಕಕ್ಕೆ ಹೋಗುವ ಶಕ್ತರಾಗಿದ್ದವರು ಊರ್ಧ್ವಲೋಕಕ್ಕೆ ಹೋಗಿ ಅಲ್ಲಿ ವಾಸವಾಗಿದ್ದರೆಂಬುದಾಗಿ ಹೇಳಿರುತ್ತಾರಾದುದರಿಂದ (ರಾಕ್ಷಸರುಗಳಿಗೆ ಪಾತಾಳದಿಂದ ಸ್ವರ್ಗದವರಿವಿಗೆ ಹೋಗಿ ಬರುವಷ್ಟು ಶಕ್ತಿ ಇರುತ್ತಿದ್ದಿತಾದುದರಿಂದ ಹಿರಣ್ಯಕಶಿಪುವು ತನ್ನ ಆಪ್ತರುಗಳನ್ನೆಲ್ಲಾ ಸ್ವರ್ಗಲೋಕಕ್ಕೆ ಕರೆದೊಯ್ದನೆಂದು ತಾತ್ಪರ್ಯ) ಇದು ಸಮಂಜಸವಾಗುತ್ತದೆ. ಅಂತೂ ಭೂಮಿಯನ್ನು ಸ್ಥಾನ ಭ್ರಷ್ಟತ್ವ

ಮಾಡಿಸಿದುದೇನೋ ನಿಶ್ಚಯ. ಈ ದುರ್ಘಟಪ್ರಸಂಗದಲ್ಲಿ ಪ್ರಪಂಚವೇ ಹಾಹಾಕಾರಪಡುವಂತಾಯಿತು. ಭೂಮಿಗೆ ಅಭಿಮಾನಿ ದೇವತೆಯಾದ ಭೂದೇವಿಯು ಪ್ರಾರ್ಥಿಸುತ್ತಿರಲು ಭೂರಮಣನಾದ ಸ್ವಾಮಿಯು ಸಜ್ಜನರ ಉದ್ಧಾರಾರ್ಥವಾಗಿ ಹಿರಣ್ಯಾಕ್ಷನನ್ನು ವರಾಹಾವತಾರದಿಂದ ನಿಗ್ರಹಿಸಿ ತನ್ನ ದಂಷ್ಟ್ರದಿಂದ ಪಾತಾಳಕ್ಕಿಳುಹಿಸಿದ ಭೂಮಿಯನ್ನು ಎತ್ತಿ ಸ್ವೈಜಸ್ಥಾನದಲ್ಲಿ ಸ್ಥಾಪಿಸಿದನು. ಅರ್ಥಾತ್ ಭೂಮಿಯನ್ನು ಉದ್ಧಾರ ಮಾಡಿದನು. ಈ ಕಾರಣದಿಂದ ಹಿರಣ್ಯಕಶಿಪುವು ಹರಿದ್ವೇಷಿಯಾಗಿ ನಾಸ್ತಿಕವಾದಿಯಾಗಿ ತನ್ನ ರಾಷ್ಟ್ರದಲ್ಲಿಯೂ ನಾಸ್ತಿಕ ಮತವನ್ನೇ ಪ್ರಚಾರ ಮಾಡಹತ್ತಿದನು. ಪ್ರಹ್ಲಾದನೆಂಬ ಪರಮ ಭಾಗವತೋತ್ತಮನಾದ ವಿಷ್ಣುಭಕ್ತನೋರ್ವನು ಈತನ ಪುತ್ರತ್ವೇನ ಜನಿಸಿದನು. ದುರ್ಮಾರ್ಗಿಯಾದ ಹಿರಣ್ಯಕಶಿಪುವು ಪೂರ್ಣ ವಿಷ್ಣುದ್ವೇಷಿಯಾಗಿ(ಮದನ್ಯೋ ಜಗದೀಶ್ವರಃ,(ಭಾಗವತ) ಎಂಬುವ ಹಠಪ್ರತಿಜ್ಞೆಯುಳ್ಳವನಾಗಿ, ನಿರೀಶ್ವರ ವಾದಪರನಾದುದರಿಂದ, ಗರ್ಭದಲ್ಲಿಯೇ ಭಗವತ್ಸಂಕಲ್ಪಾನುಸಾರ ಭಗವತ್ತತ್ವಗಳನ್ನು ನಾರದರಿಂದ ಉಪದೇಶಹೊಂದಿದ ಪ್ರಹ್ಲಾದ ಕುಮಾರನು ಆಸ್ತಿಕ ಮತದಲ್ಲಿ ದಾರ್ಢ್ಯಜ್ಞಾನಉಳ್ಳವನಾಗಿ ಈಶ್ವರಕರ್ತೃತ್ವ ವಾದಪರನಾಗಿದ್ದುದನ್ನು ಕಂಡು ಸಹಿಸಲಾರದೆ ಆಸುರೀಸ್ವಭಾವದಿಂದ ಪುತ್ರಮೋಹವನ್ನು ಕೂಡಾ ತೊರೆದು ದುರ್ಮತಗಾಮಿಯಾದ ಹಿರಣ್ಯಕಶಿಪುವು ರಾಜಾಜ್ಞೋಲ್ಲಂಘನ ತಪ್ಪಿತವನ್ನು ಪ್ರಹ್ಲಾದನಲ್ಲಾರೋಪಿಸಿ ಪುತ್ರನನ್ನೇ ಹಿಂಸಿಸತೊಡಗಿದನು, ಹಿಂಸೆ ಎಂದರೆ ಸಾಮಾನ್ಯವಾದ ಹಿಂಸೆಯೆ ಪ್ರಾಣದಂಡನೆಯನ್ನೇ ವಿಧಿಸಿದನು. ದೃಢಭಕ್ತನಾದ ಪ್ರಹ್ಲಾದನು ತನ್ನ ತಂದೆಯಿಂದ ಸಂಭವಿಸುತ್ತಿದ್ದ ಕಷ್ಟನಿಷ್ಠುರಗಳಿಗೊಂದಕ್ಕೂ ಭಯಪಡದೆ ಶ್ರೀಹರಿಯಲ್ಲಿ ದೃಢನಂಬಿಕೆಯಿಂದ ಹರಿನಾಮ ಸಂಕೀರ್ತನೆಯ ಬಲದಿಂದ, ಬಂದ ವಿಪತ್ತಿನಿಂದೆಲ್ಲಾ ಪಾರಾದನು. ನಿರೀಶ್ವರ ವಾದಿಯಾದ ಕಶಿಪುವು ಈಶ್ವರವಾದಿಯಾದ ಪುತ್ರನನ್ನು ನೋಡಿ, ಇವನೇ ಪುತ್ರರೂಪದ ತನ್ನ ಶತ್ರುವೆಂದೂ ಹೇಗಾದರೂ ವಾದಮುಖದಲ್ಲಿ ಇವನನ್ನು ಸೋಲಿಸಿ ತನ್ನ ಮತವನ್ನು ಸ್ಥಾಪಿಸಿ ಮಾತ್ರವಲ್ಲ ಇವನಿಗೆ ಪ್ರಾಣಾಂತ ಶಿಕ್ಷೆಯನ್ನೇ ವಿಧಿಸಬೇಕೆಂದೂ

ನಿಶ್ಚೈಸಿ, ವಾದಕ್ಕಾರಂಭಿಸಲು ತಂದೆ ಮಕ್ಕಳ ಈ ವಾದದ ಸಂದರ್ಭದಲ್ಲಿ ಶ್ರೀಗೋವಿಂದನು ತನ್ನ ಪರನಾದ ಪ್ರಹ್ಲಾದನ ಮತದಂತೆ ಕಂಭದಿಂದ ಬ್ರಹ್ಮಾದಿಗಳಿಗೂ ಹೊಸದಾದ ರೂಪದಿಂದ ಆವಿರ್ಭವಿಸಿ ಹಿರಣ್ಯಕಶಿಪುವನ್ನು ನಿಗ್ರಹಿಸಿ ತನ್ನ ಸರ್ವ ವ್ಯಾಪಿತ್ವವನ್ನೂ, ಶುಕ್ಲಶೋಣಿತಸಂಬಂಧ ರಹಿತತ್ವವನ್ನೂ ನಿರೀಶ್ವರವಾದವು ಮಿಥ್ಯೆಯೆಂಬುದನ್ನೂ, ಅರ್ಥಾತ್ ಆಸ್ತಿಕಮತವೇ ಸತ್ಯವೆಂದೂ, ವಿಷ್ಣುವೇ ಸರ್ವೋತ್ತಮ, ಸರ್ವವ್ಯಾಪಿ ಎಂಬುದನ್ನೂ ವಿಷ್ಣುಭಕ್ತರಿಗೇ ಎಂದೆಂದಿಗೂ ಜಯವೆಂಬುವ ನಾನಾಬಗೆಯ ನೀತಿಯನ್ನು ಪ್ರಪಂಚದಲ್ಲಿ ನಿದರ್ಶನಕ್ಕೆ ತಂದು ಪ್ರಹ್ಲಾದ ಕುಮಾರನನ್ನು ಪರಿಪಾಲಿಸಿ ಲಕ್ಷ್ಮೀನೃಸಿಂಹರೂಪದಿಂದ ಆಸ್ತಿಕಮತವನ್ನುದ್ಧಾರವಮಾಡಿ ಧರ್ಮಸ್ಥಾಪನೆಯನ್ನು ಮಾಡಿದನು.

॥ ಜಾನಕೀವಲ್ಲಭಾಯ ನಮಃ ॥

ನಾಲ್ಕನೆಯ ತರಂಗ.

ತ್ರೇತಾಯುಗ.

ಕೃತಯುಗದಲ್ಲಿ, ಇಲ್ಲಿ ಹೇಳಿರುವವರಿಷ್ಟೆ ದುಷ್ಟರೆಂಬರ್ಥವಲ್ಲ, ಇವರಂತೆ ಸೋಮಕಾಸುರನೇ ಮುಂತಾದ ಅನೇಕರಾದ ಬಹುಮಂದಿ ದುಷ್ಟ ರಾಕ್ಷಸರುಗಳು ಇವರುಗಳಂತೆ ಧರ್ಮಕಂಟಕರಾಗಿರುತ್ತಿದ್ದರಾದರೂ ಉದಾಹರಣೆಗಾಗಿ ಒಬ್ಬಿಬ್ಬರ ವಿಷಯವನ್ನು ಮಾತ್ರ ಇಲ್ಲಿ ಉದಹರಿಸಿರುತ್ತದೆ. ಅಂತೆಯೆ ತ್ರೇತಾಯುಗದಲ್ಲಿಯಾದರೋ ಪುನಃ ಪ್ರಾರಂಭವಾಯಿತು, ರಾವಣ ಕುಂಭಕರ್ಣರೆಂಬ ರಾಕ್ಷಸರು ಹಿರಣ್ಯಾಕ್ಷ ಹಿರಣ್ಯಕಶಿಪುಗಳಂತೆ ವರ ಬಲದಿಂದ ಸಕಲ ದೇವತೆಗಳನ್ನೂ ಕೈಸೆರೆಮಾಡಿದವರಾಗಿ ಭಗವದ್ದ್ವೇಷಿಗಳಾಗಿ, ಸಜ್ಜನರಿಗೂ, ಸ್ವಧರ್ಮಕ್ಕೂ ಕಂಟಕರಾಗಿರುತ್ತಿದ್ದರು. ಇಂದ್ರಾದಿ ದೇವತೆಗಳನ್ನೇ ಸೆರೆಹಿಡಿದರೆಂದಬಳಿಕ ಮನುಷ್ಯರ ಪಾಡೇನು, ತಾವು ದ್ವೀಪಾಂತರವಾಸಿಗಳಾಗಿದ್ದರೂ, ಆರ್ಯಾವರ್ತದಲ್ಲಿ ಪರಮ ಸಾತ್ವಿಕರಾಗಿ, ಧರ್ಮಮಾರ್ಗದಿಂದ ಭರತಭೂಮಿಯನ್ನಾಳುತ್ತಿರುವ ದಶರಥ, ಜನಕ ಮುಂತಾದ ಧಾರ್ಮಿಕ ರಾಜರುಗಳ ಮೇಲೆ ತಮ್ಮ ಭುಜಬಲ ಪರಾಕ್ರಮದಿಂದ ಅಧಿಕಾರವನ್ನು ಸ್ಥಾಪಿಸಿ ದರ್ಪವನ್ನು ತೋರು

ತ್ತಿದ್ದರು. ಅಲ್ಲದೆ, ತಮ್ಮವರಾಗಿರುವ ಮಾರೀಚ ಸುಬಾಹು ಮುಂತಾದ ರಾಕ್ಷಸರುಗಳಿಗೆ ಆರ್ಯಾವರ್ತದ ಧಾರ್ಮಿಕ ರಾಜರುಗಳಾದ ದಶರಥ ಜನಕಾದಿಗಳಮೇಲಿನ ಅಧಿಕಾರಿಗಳನ್ನಾಗಮಾಡಿ, ಭರತಭೂಮಿಯ ಶಿಕ್ಷೆರಕ್ಷಣೆಯ ವಿಚಾರಣಾ ಕರ್ತರನ್ನಾಗಿ ನಿಯಮಿಸಿದರು. ದುಷ್ಟರಾದ ಈ ಮಾರೀಚಾದಿ ರಾಕ್ಷಸರಾದರೋ ಮಾಡುತ್ತಿದ್ದ ಕಾರ್ಯಗಳೇನೆಂದರೆ ಎಲ್ಲಿ ಯಜ್ಞಾರಂಭಮಾಡುವರೋ ಆ ಸುಳುವು ತಿಳಿದು ಅಲ್ಲಿ ವಿಘ್ನಮಾಡುವುದು, ತಪಸ್ವಿಗಳ ತಪಸ್ಸನ್ನು ಕೆಡಿಸುವುದು, ಹೀಗೆಯೇ ಮುಖ್ಯತಃ ಸದ್ಧರ್ಮಾಚರಣೆಗೆ ವಿಘ್ನಕಾರಿಗಳಾಗುತ್ತ ತಮ್ಮ ಅಧಿಕಾರದ ಸಾಮರ್ಥ್ಯವನ್ನು ವಿನಿಯೋಗಿಸುತ್ತಿದ್ದರು. ಇವರುಗಳ ಆರ್ಭಟವನ್ನು ಗೆಲ್ಲಲಾರದ ದಶರಥ ಜನಕಾದಿಗಳು ಬಾಯಿ ಬಾಯಿ ಬಿಡುತ್ತಿದ್ದರು. ಆಗ ಶ್ರೀಮನ್ನಾರಾಯಣನು ದಶರಥರಾಯನಲ್ಲಿ ಶ್ರೀರಾಮಾವತಾರವನ್ನು ಮಾಡಿ ದೇವತೆಗಳಿಗೆ ತೃಪ್ತಿಯಾಗುವಂತೆ ವಿಶ್ವಾಮಿತ್ರರ ಮುಖದಿಂದ ಯಜ್ಞವನ್ನು ಮಾಡಿಸಿ, ಆ ಸನ್ನಿವೇಶದಲ್ಲಿ ಮಾರೀಚ ಸುಬಾಹುಗಳ ಸೊಕ್ಕಡಗಿಸಿ ಜನಕಪುತ್ರಿಯಾದ ಜಾನಕಿಯ ನೆಪದಿಂದ ದುಷ್ಟ ದಶಕಂಠನೇ ಮೊದಲಾದ ಸರ್ವ ರಾಕ್ಷಸರನ್ನೂ ನಿಗ್ರಹಿಸಿ, ವಿಭೀಷಣನನ್ನು ರಕ್ಷಿಸಿ ರಾಷ್ಟ್ರೋದ್ಧಾರ ಧರ್ಮೋದ್ಧಾರಗಳನ್ನು ಮಾಡಿ ತ್ರೇತಾಯುಗದಲ್ಲಿ ಶ್ರೀಮನ್ನಾರಾಯಣನು ಧರ್ಮರಕ್ಷಣೆಯನ್ನು ಮಾಡಿದನು.

॥ ಲಕ್ಷ್ಮೀಪತಯೇ ನಮಃ ॥

ಐದನೆಯ ತರಂಗ.

ದ್ವಾಪರಯುಗ.

ಬರಬರುತ್ತ ಒಂದು ಯುಗಕ್ಕಿಂತಲೂ ಒಂದು ಯುಗದಲ್ಲಿ, ಆಯುಸ್ಸು ಬಲ, ಬುದ್ಧಿ, ಮನಸ್ಥೈರ್ಯತೆ, ಸರ್ವ ವಿಷಯದಲ್ಲಿಯೂ ಶಕ್ತಿಯು ಕಡಿಮೆಯಾಗುತ್ತ ಬರುವುದು ಸ್ವಭಾವವು. ಸಾತ್ವಿಕ, ರಾಜಸ, ತಾಮಸವೆಂಬ ತ್ರಿವಿಧ ಜೀವರುಗಳಲ್ಲಿ ಆಯಾಯ ಯುಗಕ್ಕೆ ತಕ್ಕಂತೆ ತ್ರಿವಿಧ ಜೀವರುಗಳು ಸಂಖ್ಯಾವೃತ್ಯಾಸ ಕ್ರಮಗಳಿಂದ ಸೃಷ್ಟಿಸಲ್ಪಡುತ್ತಾರೆ.

ಅಂತೆ ಈ ದ್ವಾಪರಯುಗದಲ್ಲಿ ಕೃತ ತ್ರೇತೆಯುಗಿಂತಲೂ, ದುಸ್ಸಾಧನ ಜೀವಿಗಳಾದ ತಾಮಸ ಜೀವಿಗಳು ಜನ್ಮಗ್ರಹಣಕ್ಕೆ ವಿಶೇಷವಾದವಕಾಶವನ್ನೊದಗಿಸಿಕೊಂಡು ಹಾವಳಿ ಮಾಡಲುಪಕ್ರಮಿಸಿದರು. ಇವರುಗಳಲ್ಲಿ, ಕಂಸನ ಬಾಧೆಯಂತೂ ಹೇಳತೀರದು. ರಾಜವಂಶದಲ್ಲಿ ಹುಟ್ಟಿ ಪದವೀಧರನಾಗಿದ್ದರೂ ಅಸುರ ಸ್ವಭಾವದಿಂದ ಲುಬ್ಧಕಧೀವರ ವೃತ್ತಿಯನ್ನನುಸರಿಸಿದ್ದನು. ಇವನ ಅನುವರ್ತಿಗಳಾದ ರಾಕ್ಷಸರೆಷ್ಟುಮಂದಿ, ಇವರ ಹಾವಳಿ ಎಂತಹುದು, ಶ್ರೀಮನ್ನಾರಾಯಣನು ಕೃಷ್ಣಾವತಾರ ಮಾಡಿ ಅನುಯಾಯಿಗಳ ಸಮೇತ ಈ ದುಷ್ಟನಾದ ಕಂಸನನ್ನು ಧ್ವಂಸಮಾಡಿ, ದುರ್ಘಟ ಪ್ರಸಂಗದಿಂದ ಪಾರುಮಾಡಿದನು. ಅಲ್ಲದೆ, ಬಕ, ಹಿಡಿಂಬ, ಕಿರ್ಮೀರ ಮೊದಲಾದ ರಾಕ್ಷಸರುಗಳು ಕಂಟಕರಾಗಿದ್ದರೂ ಹಿಂಸಾಕಾರ್ಯದಿಂದ ಮಾತ್ರ ಲೋಕೋಪದ್ರವ ಮಾಡುತ್ತಿದ್ದರು. ಇದೇಕಾಲದಲ್ಲಿ, ಮತ್ಸ್ಯನಗರದಲ್ಲಿ ಹೆಸರಿಗೆ ಮಾತ್ರ ವಿರಾಟನು ರಾಜನಾಗಿದ್ದು ರಾಜ್ಯದ ಸರ್ವಾಧಿಕಾರಿಯೂ ದುಷ್ಟನೂ ಆದ ಕೀಚಕನು ಸಜ್ಜನರಿಗೂ ಸನ್ಮಾರ್ಗಕ್ಕೂ ಎಷ್ಟು ಗಂಡಾಂತರವನ್ನು ತಂದೊಡ್ಡುತ್ತಿದ್ದನೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಏಕಕಾಲದಲ್ಲಿ ವಿಪತ್ಪರಂಪರೆ ಎಂಬಂತೆ. ಸಾಕ್ಷಾತ್ ಕಲಿಯೇ ಧರ್ಮವನ್ನು ಹಾಳುಮಾಡಲು ತನ್ನನುಯಾಯಿಗಳನ್ನು ತಮ್ಮಂದಿರನ್ನಾಗಿ ಮಾಡಿಕೊಂಡು ಭೂಮಿಯಲ್ಲಿ ಜನ್ಮಿಸಿ ತಾನು ಚಕ್ರವರ್ತಿಪದವೀಧರನಾಗಿ, ದುರ್ಯೋಧನನೆಂಬಭಿದಾನದಿಂದ ದುಶ್ಯಾಸನನನ್ನೇ ಮುಂದುಮಾಡಿದನು. ಇವರೆಲ್ಲರ ಮಾತೂ ಹಾಗಿರಲಿ, ಇವರುಗಳು ದೇಹಬಲದಿಂದ ಹಿಂಸಾಕಾರ್ಯದಿಂದಲಾಗಲಿ ಅಧಿಕಾರ ಬಲದಿಂದ ದುಶ್ಯಾಸನಗಳಿಂದಲಾಗಲಿ ಸಾತ್ವಿಕರ ಕಾಯಿಕ ಸತ್ಕರ್ಮಾಚರಣೆಗೆ ಮಾತ್ರ ಕಂಟಕರಾಗಿದ್ದರೂ ವೈಲಕ್ಷಣ್ಯದಿಂದ ಧರ್ಮಕಂಟಕರಾಗಿದ್ದರು. ಈ ದುರ್ಮಾರ್ಗಿಗಳಿಗೆಲ್ಲಾ ಗುರುವೆನ್ನಬಹುದಾದ ಮತ್ತೋರ್ವನು, ಕಾಯಿಕ ಸತ್ಕರ್ಮಾಚರಣೆಯು ಕೆಟ್ಟರೂ ಒಂದಲ್ಲದೊಂದುಕಾಲದಲ್ಲಿ ಆಚರಿಸಲವಕಾಶವಾಗಬಹುದು, ಆದುದರಿಂದ ಮಾನಸಿಕ ಸನ್ಮಾರ್ಗಕ್ಕೆ ಕಂಟಕನಾಗಬೇಕೆಂದು ಯೋಚಿಸಿ ಪ್ರಯತ್ನಪಟ್ಟನು. ಅರ್ಥಾತ್ ಮನಸ್ಸಿನ ಸದ್ವರ್ತನವನ್ನೇ ಹಾಳುಮಾಡಲುಪಕ್ರಮಿ [illegible] ಅಜ್ಞಾನ

ಭೂತವಾದ ನಾಸ್ತಿಕ ಜ್ಞಾನವಾಗುವಂತೆ ಮಾಡಿದನು. ಮನಸ್ಸಿನ ಬೆಳವಣಿಗೆಗೆ ಕಾರಣಭೂತವಾದುವು ವೇದಶಾಸ್ತ್ರಾದಿಗಳು. ವೇದಶಾಸ್ತ್ರಗಳಿಗೆ ಅಪಾರ್ಥ ಕಲ್ಪನಮಾಡಿ ದುರ್ಮತಪ್ರಚಾರಕನಾಗಿ ಈ ದುರ್ಮತ ಸಾಂಕ್ರಾಮಿಕ ಜಾಡ್ಯವು ಸಜ್ಜನರ ಮನಸ್ಸಿಗಂಟುವಂತೆ ಮಾಡಿದನು. ಮನಸ್ಸಿನ ಪರಿಸ್ಥಿತಿಯೇ ವಿಪರೀತವಾಯಿತೆಂದರೆ, ಸರಿಪಡಿಸುವುದು ಬಹುಕಠಿನ, ಆದುದರಿಂದಲೇ ಈ ದುಷ್ಟನು ಈ ವಿಧದಿಂದ ಪ್ರಪಂಚವನ್ನು ಹಾಳುಮಾಡುತ್ತಿದನು. ದಂತವಕ್ರ ಶಿಶುಪಾಲ, ವಿದೂರಥ, ಜಯದ್ರಥ, ರುಗ್ಮಿ, ಚಕ್ರೇಶ್ವರನಾದ ದುರ್ಯೋಧನನೇ ಮೊದಲಾಗಿ ಸರ್ವರೂ ಈತನ ಪ್ರಿಯಶಿಷ್ಯರಾಗಿದ್ದರು. ಬಕ, ಕೀಚಕ, ಕಿರ್ಮೀರಾದಿ, ದುಷ್ಟರಾಕ್ಷಸರುಗಳಾದರೋ, ಅಸಾಧ್ಯ ಬಲಶಾಲಿಗಳಾಗಿ ದೇಹಬಲದಿಂದ, ಧೂರ್ತತೆ, ಹಿಂಸಾಕಾರ್ಯ, ಇಷ್ಟರಿಂದಲೇ, ಕಂಟಕರು, ಈ ಪಾಪಿಯಾದರೋ: ದೇಹಬಲವೆಂದರೆ, ನಿರುಪಮ ಸಾಮರ್ಥ್ಯವುಳ್ಳವನಾಗಿದ್ದನು. ಈತನಲ್ಲಿ ಇದೊಂದು ಭಯ. ಶಾಸ್ತ್ರದಲ್ಲಿ ಜಗತ್ಪಂಡಿತನಾದ ನಾಸ್ತಿಕ ವಾದಿಯು, ಇದೊಂದು ಭಯ. ಈವಾದ ಭಯಕ್ಕಾಗಿಯೇ ಶಲ್ಯಾದಿ ಮಹಾ ಪ್ರಭೃತಿಗಳೂ ಕೂಡ ಈತನಿಗೆ ಭಯಪಡುತ್ತಿದ್ದರು. ಹಾಗಲ್ಲದಿರಲು, ಆಚಾರ್ಯರೇ,(ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ |ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ)ಎಂದರೆ, ಭೀಮ, ಬಲರಾಮ, ಶಲ್ಯ, ಕೀಚಕ ಇವರು ನಾಲ್ವರ ಸಮಾನ ಬಲಶಾಲಿಗಳನ್ನು ಪ್ರಪಂಚದಲ್ಲಿ ತಾವು ಕೇಳಿಯೇ ಇಲ್ಲವೆಂಬುದಾಗಿ ಅಪ್ಪಣೆಕೊಡಿಸಿರುತ್ತಾರೆ. ಹೀಗಿರುವಾಗ ಜಯಾಪಜಯಗಳ ಮಾತು ಹೇಗೂ ಇರಲಿ ಜಗತ್ತಿನಲ್ಲಿರುವ ಬಲಶಾಲಿಗಳಲ್ಲಿ ಗಣ್ಯನಾಗಿರುವ ಶಲ್ಯನು ಈ ಪಾಪಿಯೊಂದಿಗೆ ಯುದ್ಧಪ್ರಸಕ್ತಿಯನ್ನು ಮಾಡುವಷ್ಟಾದರೂ ಸಾಮರ್ಥ್ಯವುಳ್ಳವನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ಪರಂತು, ನಾಸ್ತಿಕ ವಾದದಲ್ಲಿ ಪಂಡಿತನಾದ ಇವನೊಂದಿಗೆ ವಾದಮಾಡುದಲ್ಲ ಗೆಲ್ಲುವಷ್ಟು ಶಾಸ್ತ್ರ ಜ್ಞಾನಬಲವು ತನಗಿಲ್ಲವಿದ್ದುದರಿಂದಲೇ ತಾನು ಅಸಮರ್ಥನಂತೆ ಈತನಲ್ಲಿ ಭಯಗ್ರಸ್ತನಾಗಿರುತ್ತಿದ್ದನು. ಅಂತೂ, ಇವನಿಗೆ ಪ್ರಪಂಚದಲ್ಲಿ ಇದಿರೇ ಇಲ್ಲವಾಯಿತು. ಈ ಪಾಪಿಯಾರೆಂಬುದನ್ನು ತಿಳಿಯುವುದರಲ್ಲಿ ವಾಚಕರು

ಕುತೂಹಲವುಳ್ಳವರಾಗಿರಬಹುದಲ್ಲವೆ, ಈ ಪಾಪಿಯೇ ಜರಾಸಂಧನು. ಈತನ ದುರ್ಮಾರ್ಗ ವಿಚಾರಗಳನ್ನು ಈತನ ಸಂಪೂರ್ಣಚರಿತ್ರೆಯಿಂದ ತಿಳಿಯಬೇಕಾದರೆ, ಈ ದುರಾತ್ಮನ ಚರಿತ್ರೆಯಿಂದಲೇ ನಮ್ಮ ಪುಸ್ತಕವು ಮುಗಿಯಬಹುದು! ಮಾತ್ರವಲ್ಲ, ವಿಶೇಷವಾದ ಇವನ ಗುಣಕಥನದಿಂದಲಾದರೂ ಫಲವೇನು, ಅನೇಕ ಸೇಳಿ ಈ ಪಾಪಿಯ ಹೆಸರನ್ನು ಹೇಳಲು, ಅಭ್ಯಾಸಬಲದಿಂದ ಇದೇ ಹೆಸರು ನಾಲಿಗೆಯಲ್ಲಿ ಬೇರೂರಬಹುದಾದುದರಿಂದ ನಮ್ಮ ಲೇಖನಿಯು ಇವನ ಸಂಪೂರ್ಣಚರಿತ್ರೆಯನ್ನು ಲೇಖಿಸಲು ಒಡಂಬಡುವುದಿಲ್ಲವು. ಇವನ ವಿಷ್ಣುದ್ವೇಷದ ಪರಿಸ್ಥಿತಿಯನ್ನು ಕುರಿತು ಒಂದೇ ಒಂದು ವಿಷಯವನ್ನು ಇಲ್ಲಿ ತಿಳಿಸಲು ಇವನ ವಿಷ್ಣುದ್ವೇಷದ ಸ್ಥಿತಿಯು ವಾಚಕರ ಮನಸ್ಸಿಗೆ ಅವಗಾಹನವಾಗಬಹುದು.

॥ ತ್ರಿವಿಕ್ರಮಾಯ ನಮಃ ॥

ಆರನೆಯ ತರಂಗ

ವಿಷ್ಣುದ್ವೇಷ.

ಲೋಕಪಾವನೆಯಾದ ಪವಿತ್ರಳಾದ ಭಾಗೀರಥಿಯನ್ನು ತಾನು ಸ್ಪರ್ಶ ಮಾಡಲಿಕ್ಕಿಲ್ಲವೆಂಬುವ ಹಠಪ್ರತಿಜ್ಞೆಯನ್ನು ಮಾಡಿದ್ದನು. ಏತಕ್ಕೆಂದರೆ, ಭಾಗೀರಥಿಯು, ವಿಷ್ಣುಪದೋದ್ಭವೆ ಎಂಬುದರಿಂದ, ವಿಷ್ಣುವಿನ ಸಂಬಂಧವಸ್ತುಗಳೂ ಅಪವಿತ್ರಗಳೆಂದೂ, ತನ್ನ ದ್ವೇಷಾರ್ಹವಾದುವುಗಳಲ್ಲದೆ ಸ್ಪರ್ಶಾರ್ಹವಲ್ಲವೆಂದೂ, ದ್ವೇಷಬುದ್ಧಿಯಿಂದ ಭಾಗೀರಥಿಯ ಸ್ಪರ್ಶಮಾತ್ರದಿಂದ ತನ್ನ ಅಸ್ಪೃಷ್ಟವ್ರತವೇ ಕೆಟ್ಟುಹೋದೀತೆಂಬುವ ಭಯದಿಂದ ಸ್ವಪ್ನದಲ್ಲಿಯೂ ಕೂಡ ಇವನಿಗೆ ಇಷ್ಟು ದ್ವೇಷವಿದ್ದಿತೆಂದ ಮೇಲೆ ಇವನ ವಿಷ್ಣುದ್ವೇಷಕ್ಕಾದರೂ ಎಲ್ಲಿ ನವರೆಗವಧಿ ಎಂಬುದನ್ನು ವಾಚಕರೇ ಊಹಿಸಬೇಕಾದುದು. ತಾನು ದ್ವೇಷಿಸುತ್ತಿರುವುದು ಮಾತ್ರವಲ್ಲ. ತನ್ನ ಅನುಯಾಯಿಗಳಲ್ಲಿಯೂ, ತನ್ನ ರಾಜ್ಯದಲ್ಲಿಯೂ ಸ್ಥಾಪಿಸಿದ್ದನು. ಯಾರೇ ಆಗಲಿ, ವೈಷ್ಣವಲಾಂಛನವುಳ್ಳವರೆಂದರೆ ಅವರಲ್ಲಿ ಈತನಿಗೆ ಮಹಾದ್ವೇಷ, ಇಂತಹ ದುಷ್ಟನ ಉಚ್ಛ್ರಾಯಾವಸ್ಥೆಯ ದುರ್ಮತಪ್ರಶಂಸನ

ಕಾಲದಲ್ಲ ನಮ್ಮಾರ್ಯರು ಧರ್ಮವನ್ನು ಹೇಗೆ ಕಾಪಾಡಿಕೊಂಡರೊ, ಧರ್ಮವೆಂಬುವ ನಾಮಮಾತ್ರವಾದರೂ ಉಳಿದುದು ಹೇಗೊ ಶ್ರೀಹರಿಯೇ ಬಲ್ಲನು. ವಿಷ್ಣುದ್ವೇಷಿಯಾದ ಈ ಪಾಷಂಡಿಯನ್ನು ತಾನು ಜೈಸುವುದಕ್ಕಿಂತಲೂ ತನ್ನ ಭಕ್ತನಿಂದ ಪರಾಜಿತನನ್ನಾಗಿ ಮಾಡಿಸಲು ವಿಷ್ಣುದ್ವೇಷಿಯನ್ನು ವಿಷ್ಣುಭಕ್ತನು ಜೈಸಿದನೆಂಬುವ ತನ್ನ ಭಕ್ತನ ಶಾಶ್ವತವಾದ ಕೀರ್ತಿಯು ಜಗತ್ತಿನಲ್ಲಿ ಸ್ಥಿರವಾಗುವುದೇ ತನ್ನ ಸಂಕಲ್ಪವೆಂಬುದನ್ನು ಜಗತ್ತಿನಲ್ಲಿ ಮೆರೆಯಿಸಲು ತಾನು ಸೋತಂತೆ ನಟಿಸಿ, ತನ್ನ ಭಕ್ತನಾದ ಭೀಮಸೇನನಿಂದ ಈ ಜರಾಸಂಧನನ್ನು ಶ್ರೀಕೃಷ್ಣನು ಧ್ವಂಸ ಮಾಡಿಸಿದನು.

॥ ಶ್ರೀರುಗ್ಮಿಣೀಶಾಯ ನಮಃ ॥

ಏಳನೆಯ ತರಂಗ.

ಭೀಮಸೇನನ ದಿಗ್ವಿಜಯವು.

ಕಾಶೀರಾಜನು ತನ್ನ ಪುತ್ರಿಯಾದ ಕಾಳೀದೇವಿಗೆ ಸ್ವಯಂವರವನ್ನು ಏರ್ಪಡಿಸಿ ದೇಶದಲ್ಲಿರತಕ್ಕ ರಾಜರುಗಳಿಗೆಲ್ಲಾ ಆಹ್ವಾನಪತ್ರಿಕೆಯನ್ನು ಕಳುಹಿಸಿರಲು, ಭರತಖಂಡದ ಯಾವತ್ತು ದೇಶದ ರಾಜರುಗಳೂ ಬಂದು ಸ್ವಯಂವರಮಂಟಪದಲ್ಲ ನೆರೆದಿರಲು ಅವರಲ್ಲಿ ಪಾಂಡುರಾಜನ ಪುತ್ರನಾದ ಭೀಮನೂ ಒಬ್ಬನಾಗಿದ್ದನು. ಕಾಶೀಶನು ಸರ್ವಾಭರಣಭೂಷಿತಳಾದ ತನ್ನ ಪುತ್ರಿಯನ್ನು ರಾಜಸಭೆಗೆ ಕರೆತಂದು, ತನ್ನ ಪ್ರತಿಜ್ಞೆಯಂತೆ, ಅಮ್ಮಾ, ಮಗಳೆ! ಈ ನೆರೆದಿರುವ ರಾಜರುಗಳ ಸಮೂಹದಲ್ಲ ನಿನ್ನ ಮನ ಒಪ್ಪಿ ನೀನು ಯಾರಿಗೆ ಪುಷ್ಪಮಾಲಿಕೆಯನ್ನು ಸಮರ್ಪಿಸುವೆಯೋ ಅವನಿಗೆ ನಿನ್ನನ್ನು ಪಾಣಿಗ್ರಹಣ ಮಾಡಿಕೊಡುವೆನೆಂದೆನ್ನಲು ಆಗ, ಮಹಾ ಭಕ್ತಿಯಿಂದ ತನ್ನ ಸ್ವಾಮಿಯು ಭೀಮಸೇನನೇ ಎಂದು ತಿಳಿದ ಕಾಳೀದೇವಿಯು ಭೀಮಸೇನನಿಗೆ ಪುಷ್ಪಮಾಲಿಕೆಯನ್ನು ಸಮರ್ಪಿಸಲು ಸಂತೋಷಪೂರ್ವಕ ಕಾಶೀಶನು ತನ್ನ ಪುತ್ರಿಯನ್ನು ಭೀಮಸೇನನಿಗಿತ್ತು ಕಲ್ಯಾಣಕಾರ್ಯವನ್ನು ನೆರವೇರಿಸಿದನು. ಈ ಮಂಗಲೋತ್ಸವವನ್ನು ನೋಡಿ ಸಹಿಸಲಾರದ, ದಂತ

ವಕ್ರ, ಶಿಶುಪಾಲ, ಜಯದ್ರಥ, ವಿಡೂರಥ ಇವರೇ ಮೊದಲಾದವರು ಭೀಮಸೇನನಲ್ಲಿ ಯುದ್ಧೋನ್ಮುಖರಾಗಲು ವಾಮಹಸ್ತಪ್ರಹಾರಮಾತ್ರ ದಿಂದಲೇ ಇವರುಗಳನ್ನು ಸದೆಬಡಿಯಲು, ಮಹಾ ಪರಾಕ್ರಮಿಯೆಂಬುವ ಗರ್ವಿಷ್ಠನಾದ ಜರಾಸಂಧನು ಭೀಮಸೇನನಿಗೆ ಇದಿರಾಗಲು ಆಗ ಭೀಮ ಸೇನನು ಈ ಪ್ರಚ್ಛನ್ನ ನಾಸ್ತಿಕವಾದಿಯನ್ನು ವಾದಮುಖದಲ್ಲಿಯೇ ಮೊದಲು ಜೈಸಿ ಈ ಪಾಷಂಡಿಯಲ್ಲಿ ವಿಷ್ಣುಸರ್ವೋತ್ತಮತ್ವವನ್ನು ಸ್ಥಾಪಿಸಿ, ನಂತರ, ಕ್ಷಾತ್ರಧರ್ಮದಂತೆ ಬಾಹುಯುದ್ಧವನ್ನಾರಂಭಿಸಲು ಆಗ, ಭೀಮಸೇನನು ಯೋಚಿಸಿದನೇನೆಂದರೆ ಈ ವೈಷ್ಣವ ದ್ವೇಷಿಯನ್ನು ಶ್ರೀಹರಿಯ ದಯದಿಂದ ತಾನು ಹೇಗೂ ಜೈಸಿಯೇ ಜೈಸುತ್ತೇನೆ. ಪರಂತು, ಜೈಸುವ ಮೊದಲು ಈತನ ಅಂತರಂಗಶಪಥವಾದ ಗಂಗಾಸ್ಪೃಶ್ಯತೆಯ ಶಪಥಭಂಗವನ್ನು ಮಾಡಿಯೇ ಮಾಡಬೇಕೆಂದು ಯೋಚಿಸಿ ಈತನ ಕೈಕಾಲುಗಳನ್ನು ಹಿಡಿಮುಡಿ ಬಿಗಿದು ಮಕ್ಕಳು ಚಂಡುರುಳಿಸುವಂತೆ ಈತನ ದೇಹವನ್ನು ವದೆದೊದೆದು ಭಾಗೀರಥಿಯಲ್ಲಿ ಕೆಡಹಿದನು. ಆದರೆ, ಪಾಠಕರಲ್ಲಿ ಕೆಲವರಿಗೆ ಶಂಕಾಸ್ಪದವಾಗಬಹುದು. ಏನೆಂದರೆ, ದ್ವೈತಸಿದ್ಧಾಂತಪ್ರಕಾರ(ಪ್ರಥಮೋ ಹನುಮನ್ನಾಮಾ ದ್ವಿತೀಯೋ ಭೀಮ ಏವ ಚ) ಎಂದಿರುವುದರಿಂದ ಸಾಕ್ಷಾತ್ ವಾಯುದೇವರೇ ಭೀಮಸೇನನಾಗಿ ಅವತರಿಸಿದುದೆಂದಾಯಿತು. ಕಾಲದೇಶ ವರ್ತಮಾನಗಳ ಎಂತಹ ವ್ಯತ್ಯಾಸ ಪ್ರಸಂಗ ಬಂದರೂ ಯಾವ ಕಾರಣದಿಂದಲೂ, ಯಾವ ರೂಪದಿಂದಲೂ, ವಾಯುದೇವರು ಅಧರ್ಮಾಚರಣೆ ಮಾಡುವವರಲ್ಲವೆಂಬುದೂ ಉಂಟು. ಮತ್ತು ಸಾತ್ವಿಕ, ರಾಜಸ, ತಾಮಸವೆಂಬದಾಗಿ ತ್ರಿವಿಧ ಜೀವರು ಎಂದು, ಜೀವರು ಅನಾದಿ, ಜೀವರಿಗೆ, ಕರ್ಮ ಅನಾದಿ, ಗತಿ ಅನಾದಿ, ಸಾತ್ವಿಕ ಜೀವರಿಗೆ ಮೋಕ್ಷವು. ರಾಜಸ ಜೀವಿಗಳಿಗೆ ಅಂದರೆ ನಿತ್ಯ ಸಂಸಾರಿಗಳಿಗೆ ನಿತ್ಯ ಸಂಸಾರವು. ತಮೋ ಯೋಗ್ಯ ಜೀವಿಗಳಿಗೆ ತಮಸ್ಸೇ ಸ್ವಭಾವಸಿದ್ಧವೆಂದಿರುವುದು. ಪಾಠಕರುಗಳಲ್ಲಿ ಮತ್ತೊಂದು ವಿಜ್ಞಾಪನೆ. ಪ್ರತಿಯೊಂದು ವಿಷಯಗಳಿಗೂ ಆಕ್ಷೇಪಣೆ ಸಮಾಧಾನಗಳನ್ನು ವಿವರಿಸುತ್ತಾ ಬರುವುದಾದರೆ ನಮಗೆ ನಿಜವಾಗಿಯೂ, ನೂರು

ಪುರುಷ ಸಂಪೂರ್ಣ ಆಯುಸ್ಸಿದ್ದರೂ ಒಂದೇ ಒಂದು ವಿಷಯವನ್ನು ಬರೆದು ಪೂರೈಸಲು ಸಾಧ್ಯವಾಗಲಾರದು. ಮಾತ್ರವಲ್ಲ ನಾನು ಅಷ್ಟು ಸಮರ್ಥನೂ ಅಲ್ಲ, ಹಾಗೂ ತಿಳಿದಮಟ್ಟಿಗಾದರೂ ದೊಡ್ಡವರ ಉಕ್ತಿಗಳನ್ನು ಉದಾಹರಿಸೋಣವೆಂದರೆ ವಿಷಯ ಬಾಹುಳ್ಯದಿಂದ ಪ್ರಕೃತೋದ್ದೇಶ್ಯಕ್ಕೆ ಅಡಚಣೆಯಾದೀತೆಂಬುವ ಭಯದಿಂದ ಜೀವರ, ಕರ್ಮದ, ಮತ್ತು ಸ್ವರೂಪ ಯೋಗ್ಯತೆ ಇವುಗಳ ವಿಚಾರವು ಸಿದ್ಧಾಂತ ವಿಚಾರವಾದುದರಿಂದ ಮಹಾಪ್ರಕರಣಕ್ಕೆ ಕೈಹಚ್ಚದೆ ಶ್ರೀಮದಾಚಾರ್ಯರು ತಮ್ಮ ಸಿದ್ಧಾಂತದಲ್ಲಿ ಈ ರೀತಿ ಅಪ್ಪಣೆಕೊಡಿಸಿರುತ್ತಾರೆಂಬುವ ಒಂದೇ ಮಾತಿನಿಂದ ಪ್ರಕೃತ ಉದ್ದೇಶ್ಯವಿಚಾರವನ್ನು ಮುಂದರಿಸುತ್ತೇನೆ. ಶ್ರೀಮದಾಚಾರ್ಯರಲ್ಲಿ ಭಕ್ತಿಯುಳ್ಳವರು ಶ್ರೀಮದಾಚಾರ್ಯರ ವಾಕ್ಯವೆಂದ ಮಾತ್ರಕ್ಕೇ ಹೇಗೂ ಶಿರಸಾಮಾನ್ಯಮಾಡುತ್ತಾರೆ, ನಂಬದಿರುವವರನ್ನು ಹೇಗೂ ನಂಬಿಕೊಳ್ಳುವಂತೆ ಮಾಡಲು ಸಾಧ್ಯವಿಲ್ಲ. ಅಸ್ತು. ತ್ರಿವಿಧ ಜೀವದ ಯೋಗ್ಯತೆಯು ಸಿದ್ಧವೆಂದ ಬಳಿಕ, ವಿಷ್ಣುದ್ವೇಷಿಯಾದ ಈ ಜರಾಸಂಧನು ಪಾಪಾತ್ಮನೆಂಬುದರಲ್ಲಿ ಸಂಶಯವಿಲ್ಲ. ಪಾಪಿಯಾದವನಿಗೆ ನರಕಾದಿ ದುರ್ಗತಿಯೇ ಸ್ವತಃ ಏವ ಸಿದ್ಧ. ಹೀಗಿರುವಾಗ, ಯಾವ ವಿಧದಿಂದಲೂ ಅಧರ್ಮವನ್ನು ಮಾಡದಿರುವ ಭೀಮಸೇನನು ಸ್ಪರ್ಶಮಾತ್ರದಿಂದಲೇ ಸದ್ಗತಿ ಪಥವನ್ನು ತೋರುವ ಪವಿತ್ರವಾದ ಗಂಗೆಯಲ್ಲಿ ಅವೈಷ್ಣವನಾದ ಈ ಜರಾಸಂಧನನ್ನು ಕೆಡಹಿದನೆಂದರೆ ಭೀಮಸೇನನ ಧರ್ಮಕ್ಕೂ, ಜೀವನ ಯೋಗ್ಯತಾ ಸ್ವಭಾವಸಿದ್ಧವೆಂಬುವದಕ್ಕೂ ಗತಿಯೇನೆಂಬ ದೋಷಾಧಾಯಕವಾಗಬಹುದು. ಈ ಸಂದೇಹ ಪರಿಹಾರಕ್ಕಾಗಿಯೇ ಋಜುಪದಾರ್ಹರಾದ ಯತಿಕುಲತಿಲಕರಾದ ಶ್ರೀವಾದಿರಾಜತೀರ್ಥ ಶ್ರೀಪಾದಂಗಳವರು ಅಪ್ಪಣೆಕೊಡಿಸಿರುವ ಸಮಾಧಾನೋಕ್ತಿಯನ್ನು ವಾಚಕರ ಮುಂದಿರಿಸಿರುವೆನು. ಗಂಗೆಯಲ್ಲಿ ಮುಳುಗಿದ ಮಾತ್ರಕ್ಕೆ ಈತನಿಗೆ ಗಂಗಾಸ್ನಾನವಾದ ಹಾಗಾಗಲಿಲ್ಲವೆಂದೂ, ಈತನ ದೇಹಕ್ಕೆ ಗಂಗಾಜಲ ಸ್ಪರ್ಶವೇ ಆಗಲಿಲ್ಲವೆಂದೂ ಅಪ್ಪಣೆ ಕೊಡಿಸಿರುವರು. ಗಂಗೆಯಲ್ಲಿ ಬಿದ್ದಿರುವಾಗಲೂ, ಗಂಗಾಜಲ ಸ್ಪರ್ಶವಾಗಲಿಲ್ಲವೆಂದರೆ ನಂಬುವುದಾದರೂ ಹೇಗೆಂದರೆ,

ಗಂಗೆಯಲ್ಲಿ ಹರಿಯುವ ನೀರು ಮೊದಲುಗೊಂಡು ನಾನಾ ವಿಧವಾದ ನೀರುಗಳು ಬಂದು ಸೇರುವುದರಿಂದ ಈ ಪಾಪಿಯು ಜೀವನ ಯೋಗ್ಯತೆಗೆ ಸರಿಯಾದ ನೀರೇ ಈತನಿಗೆ ಲಭಿಸಿರುವುದೆಂದು, ಅದು ಹೇಗೆ, ನೀರಿಗೆ ನೀರು ಸೇರುವಾಗ ಐಕ್ಯವಾಗಿರುವ ಒಂದೇ ನೀರಿನಲ್ಲಿ ಒಬ್ಬೊಬ್ಬರಿಗೆ ತಕ್ಕಂತೆ ಬೇರೆ ಬೇರೆಯಾದ ನೀರು ಲಭಿಸುವುದಾದರೂ ಹೇಗೆ ಎಂದರೆ, ನೀರಿಗೆ ನೀರು ಸೇರುವಾಗ ಐಕ್ಯವಾದೀತೆಂದು ಕಂಡುಬಂದರೂ ಐಕ್ಯವಲ್ಲ. ಅದು ಹೇಗೆಂದರೆ, ಐಕ್ಯವಾಗುವುದಾದರೆ, ಒಂದು ಪಾವು ನೀರಿಗೆ ಮತ್ತೊಂದು ಪಾವು ನೀರು ಸೇರಿಸಿದರೆ ನೀರಿನಲ್ಲಿ ನೀರು ಸೇರಿ ಐಕ್ಯವಾದಂತೆ ತೋರಿದರೂ ಐಕ್ಯವಲ್ಲ. ಒಂದು ಪಾವು ನೀರಿಗೆ ಮತ್ತೊಂದು ಪಾವು ನೀರು ಸೇರಿಸಿದರೆ ಎರಡು ಪಾವು ನೀರಾಗುವುದಲ್ಲದೆ ಒಂದೇ ಪಾವಿರುವುದಿಲ್ಲ. ನೀರಿನಲ್ಲಿ ನೀರು ಸೇರುವುದಾದರೆ ಒಂದು ಪಾವು ನೀರಿನಲ್ಲೇ ಮತ್ತೊಂದು ಪಾವು ನೀರು ಸೇರಿ ಒಂದೇ ಪಾವು ನೀರಿರಬಹುದು. ಹಾಗಾಗುವುದಿಲ್ಲವಾದುದರಿಂದ ಒಂದು ಪಾವು ನೀರಿನ ಮೇಲೆ ಮತ್ತೊಂದು ಪಾವು ನೀರು ಬೇರೆಯಾಗಿ ನಿಂತಿದ್ದಿತೆಂದು ತಾತ್ಪರ್ಯ. ನೀರಿಗೆ ಹಾಲನ್ನು ಸೇರಿಸಲು ಮತ್ತೂ ಚೆನ್ನಾಗಿ ಸ್ಪಷ್ಟವಾಗುವುದು, ಒಂದೇಯಾದಂತೆ ಕಂಡುಬಂದರೂ ಹಂಸಪಕ್ಷಿಯು ಇದಿರಿನಲ್ಲಿರಿಸಲು ನೀರ-ಕ್ಷೀರಗಳನ್ನು ಬೇರೆ ಬೇರೆಯಾಗಿ ವಿಂಗಡಿಸುವುದು ಅಂದ ಮೇಲೆ ನೀರ-ಕ್ಷೀರಗಳು ಬೇರೆಬೇರೆಯೇ ಆಗಿದ್ದಿತೆಂಬುದು ನಿಶ್ಚಿತವಾದೀತು, ಇನ್ನು ನೀರಿನ ಗುಣವನ್ನು ನೀರಿನಿಂದಲೇ ತಿಳಿಯಬೇಕೆಂದರೂ ಸಮುದ್ರಕ್ಕೆ ದೊಡ್ಡ ದೊಡ್ಡ ನದಿಗಳು ಸಂಗಮವಾಗುವುದನ್ನು ನೋಡಿದರೆ ತಿಳಿದುಕೊಳ್ಳಬಹುದು, ಐಕ್ಯವಾದಂತೆ ಕಂಡುಬಂದರೂ ಪ್ರತ್ಯಪ್ರತ್ಯೇಕವಾಗಿಯೇ ಇರುವುದೆಂದು ಗೊತ್ತಾಗುವುದು, ಹೇಗೆಂದರೆ, ನದಿಗಳು ಸೇರುವ ಪ್ರದೇಶದಲ್ಲಿ ಸಮುದ್ರದ ನೀರನ್ನು ಪಾನಮಾಡಲು ಸಿಹಿಯಾಗಿರುವುದು. ಮಾತ್ರವಲ್ಲ ಅದೇ ಸ್ಥಳದಲ್ಲಿ ಸ್ವಲ್ಪ ಅಡಿಯಲ್ಲಿರತಕ್ಕ ನೀರನ್ನು ಪಾನ ಮಾಡಲು ಉಪ್ಪಾಗಿರುವುದು. ಆದುದರಿಂದ ಉಪ್ಪಾದ ಸಮುದ್ರದ ನೀರಿನ ಮೇಲೆ ನದಿಯ ಸಿಹಿಯಾದ ನೀರು ಬೇರೆಯಾಗಿತ್ತೆಂದು ತಿಳಿಯಬಹುದು. ಅಲ್ಲದೆ, ಆಧು

ಸಿಕ ಶಾಸ್ತ್ರಜ್ಞರೂ (ಸೈನ್ಸಿಸ್ಟ್) ಗಂಗಾನದಿಯ ಜಲವು ಎಲ್ಲಾ ನದಿಯ ಅಥವಾ ಪ್ರಪಂಚದಲ್ಲಿರುವ ಮಿಕ್ಕಾದ ನೀರಿನಂತಲ್ಲದೆ ವಿಶೇಷವಾದ ಗುಣದಿಂದ ಕೂಡಿರುವುದೆಂದು ನಿಶ್ಚೈಸಿರುವರು. ಹೇಗೆಂದರೆ, ನೋಡುವುದಕ್ಕೆ ಗ್ರಾಮಸಾರದ ನೀರನ್ನೆಲ್ಲಾ ಬಳಕೊಂಡು ಕಶ್ಮಲ ಪದಾರ್ಥಗಳಿಂದ ಕೂಡಿ ಅಶುಚಿಯಾಗಿದ್ದಂತೆ ಕಂಡುಬಂದರೂ ಶುಚಿಯಾದುದೆಂದು, ಮತ್ತು ಪ್ರಪಂಚದ ಎಲ್ಲಾ ನೀರಿನಲ್ಲಿಯೂ ಕ್ರಿಮಿಗಳಿರುವುದಾಗಿಯೂ ಗಂಗಾಜಲದಲ್ಲಿ ಕ್ರಿಮಿದೋಷವಿಲ್ಲದಿರುವುದಾಗಿಯೂ ಮಾತ್ರವಲ್ಲ. ಗಂಗಾಜಲವು ಬೇರೆಯ ಜಲದೊಂದಿಗೆ ಬೆರೆತಿದ್ದರೂ ಪ್ರತ್ಯೇಕಿಸಬಹುದಾಗಿಯೂ ಒಪ್ಪಿಕೊಂಡಿರುವರು. ಲೋಕಾನುಭವದಲ್ಲಿ, ಯಾವ ನೀರನ್ನೇ ಆಗಲಿ ಕೆಲವು ಕಾಲ ಸಂಗ್ರಹಿಸಿಡಲು ಇಲ್ಲವೆ, ಹುಳುಬೀಳುವುದು ಇಲ್ಲವೆ ಕೆಲಕಾಲಾನಂತರದಲ್ಲ ಬತ್ತಿಹೋಗುವುದು. ಈ ಗಂಗಾನದಿಯ ನೀರನ್ನು ಎಷ್ಟು ಕಾಲ ಸಂಗ್ರಹಿಸಿಟ್ಟರೂ ಕ್ರಿಮಿಗಳೂ ಉತ್ಪತ್ತಿಯಾಗುವುದಿಲ್ಲ, ಇಂಗುವುದೂ ಇಲ್ಲ. ಅನೇಕರು ನೂರಾರು ವರುಷಗಳ ಹಿಂದೆ ಸಂಗ್ರಹಿಸಿಟ್ಟ ನೀರನ್ನು ತೆಗೆದು ಉಪಯೋಗಿಸಿದ ಅನುಭವ ಉಂಟು, ಇವೆಲ್ಲಕ್ಕಿಂತಲೂ ಆಸ್ತಿಕರು ಭಕ್ತಿವಾದದಿಂದ ಯೋಚಿಸಲು ಸುರನದಿಯಾದ ಗಂಗೆಯಲ್ಲಿ ಇಂತಹದೊಂದು ಶಕ್ತಿ ಇದ್ದಿತೆಂಬುವುದೇನು ಅತಿಶಯೋಕ್ತಿಯಲ್ಲ. ಈ ಎಲ್ಲಾ ಕಾರಣಗಳಿಂದಲೂ ಜರಾಸಂಧನಿಗೆ ಗಂಗಾಸ್ಪರ್ಶವೇ ಆಗದೆ ಅವನ ಯೋಗ್ಯತೆಗೆ ತಕ್ಕ ನೀರೇ ಅವನಿಗೆ ಲಭಿಸಿತೆಂಬುವ ಮಾತು ನಿಸ್ಸಂಶಯವಾಗಿ ನಂಬತಕ್ಕದ್ದಾಗಿರುತ್ತೆ. ಈ ತತ್ವವನ್ನು ತಿಳಿದವನಾದುದರಿಂದಲೇ ಭೀಮಸೇನನು ವಿಷ್ಣುದ್ವೇಷಿಯ ಅವೈಷ್ಣವ ವ್ರತವನ್ನು ಭಂಗಮಾಡುವುದಕ್ಕಾಗಿ ಮಾತ್ರ ಜರಾಸಂಧನನ್ನು ಗಂಗೆಯಲ್ಲಿ ಕೆಡಹಿದನು ಅಂದ ಬಳಿಕ ಭೀಮನ ಧರ್ಮಕ್ಕಾಗಲಿ ದ್ವೈತಸಿದ್ಧಾಂತಕ್ಕಾಗಲಿ ಎಂದೂ ದೋಷ ಬರಲಿಲ್ಲವು. ನಂತರ ಧರ್ಮರಾಯನ ರಾಜಸೂಯಾಧ್ವರದ ಸಂದರ್ಭದಲ್ಲಿ, ಜರಾಸಂಧನಿಂದ ಕಪ್ಪವನ್ನು ತೆಗೆದುಕೊಂಡು ಹೋಗುವ ನೆಪದಿಂದ ಗಿರಿವ್ರಜಕ್ಕೆ ಬಂದು ಕ್ಷಾತ್ರಧರ್ಮಪ್ರಕಾರ ಬಾಹುಯುದ್ಧದಲ್ಲಿ ಪಾಪಿಯಾದ ಜರಾಸಂಧನನ್ನು ನಿಗ್ರಹಿಸಿದನು. ಅಲ್ಲದೆ, ಬಕ, ಕೀಚಕ,

ಹಿಡಿಂಬ, ಕಿರ್ಮೀರ, ಮೊದಲಾದ ಲೋಕಕಂಟಕರುಗಳನ್ನೂ, ದುಷ್ಟ ಶಾಸನದಿಂದ ರಾಜ್ಯದಲ್ಲಿ ಅಧರ್ಮವನ್ನು ಸ್ಥಾಪಿಸಿ ದುರ್ಮಾರ್ಗದಿಂದ ಚಕ್ರೇಶ್ವರನೆಂದು ಮೆರೆಯುತ್ತಿದ್ದ ಕೌರವನನ್ನೂ, ಅವನ ತಮ್ಮಂದಿರ ಸಮೇತ ಸಂಹರಿಸಿ ದ್ವಾಪರದಲ್ಲಿ ಭೀಮಸೇನನು ಧರ್ಮಸ್ಥಾಪನೆಯನ್ನು ಮಾಡಿದನು.

॥ ಶ್ರೀಕಲ್ಕಿನೇ ನಮಃ ॥

ಎಂಟನೆಯ ತರಂಗ.

ಕಲಿಯುಗ.

(ಮನಸ್ಸಿನಲ್ಲಿಲ್ಲದ ಮೋಹ ಕೆಣಕಿದರೆ ಬಂದೀತೆ?)ಎಂಬುವ ಗಾದೆ ಯಂತೆ ಎಷ್ಟೇ ವಿಘ್ನ್ವರಗಳು ಬಂದರೂ ಧರ್ಮವನ್ನು ನಡೆಯಿಸಿಯೇ ತೀರಬೇಕೆಂಬುವ ಸ್ಥಿರಚಿತ್ತರಾಗದೆ, ಬಾಹ್ಯಾಡಂಬರಕ್ಕಾಗಿ ಕೆಲವು ಧರ್ಮ ತತ್ವದ ಮಾತುಗಳನ್ನಾಡುತ್ತ 'ಕಲಿಯುಗ, ಕಲಿಯುಗದಲ್ಲಿ ಹೀಗೆಯೇ ಸರಿ, ಕಲಿಯುಗದಲ್ಲಿ ಅಧರ್ಮವೇ ನಡೆಯಬೇಕಾದುದು. ಈ ಯುಗವೇ ಕೆಟ್ಟದ್ದು' ಎಂಬುವ ಬರೀ ಬಾಯಿಮಾತಿನ ತತ್ವೋಪದೇಶದಿಂದಲೇ ಧರ್ಮ ಸರ್ವಸ್ವವನ್ನೂ ಮುಗಿಸುತ್ತಾ ತಮ್ಮ ಕರ್ತವ್ಯ ಕಾರ್ಯದಲ್ಲಿ ಪ್ರಯ ತ್ನಮಾಡದೆ ಕಡೆಯಲ್ಲಿ ಯುಗದ ಮೇಲೆ ತಪ್ಪುಹೊರಿಸಿ ಧರ್ಮಬಾಹಿರ ರಾಗುತ್ತಿರುವ ಅಂತಹರನ್ನು ಏನೆಂದು ಹೇಳಬಹುದು. ಇದುವರೆಗೂ ವಿವರಿಸಿದ ವಿಚಾರದಲ್ಲಿ ಕೃತ ತ್ರೇತ ದ್ವಾಪರ ಅಂದರೆ, ಸೃಷ್ಟ್ಯಾದಿಯಿಂ ದಲೂ ಧರ್ಮಕ್ಕೆ ವಿಘ್ನಗಳೂ ಬಂದೇ ಬರುತ್ತಾ ಇದ್ದವೆಂದೂ ಎಂತಹ ಕಷ್ಟ ಬಂದರೂ ನಮ್ಮ ಆರ್ಯರು ಧರ್ಮವೇ ತಮ್ಮ ಸರ್ವಸ್ವವೆಂದು ಬಹು ಕಷ್ಟದಿಂದಲಾದರೂ ಕಾಪಾಡಿಕೊಳ್ಳುತ್ತಾ ಬಂದಿರುವರೆಂದೂ ತಿಳಿ ಯುವುದು. ಅಂದ ಮೇಲೆ ಈಗ ನಮ್ಮ ಕಾಲದಲ್ಲಿ ಮಾತ್ರವಲ್ಲ, ಅಂದರೆ ಪ್ರಯತ್ನದಿಂದ ಸಾಧಿಸುವ ಕರ್ತವ್ಯ ಮಾತ್ರ ನಮ್ಮದಾಯಿತು. ಹಾಗ ಲ್ಲದೆ, ಧರ್ಮೋದ್ಧಾರ ವೇಷಧಾರಿಗಳಾಗಿ ಮಾಡುವ ಕಾರ್ಯವನ್ನು ಶುದ್ಧಾಂತಃಕರಣದಿಂದ ಮಾಡದೆ, ತಮ್ಮ ವೇಷ ಭಾಷಣ ಇಷ್ಟರಿಂದಲೇ

ಧರ್ಮೋದ್ಧಾರದ ಯಾವತ್ತು ಕಾರ್ಯವನ್ನೂ ನುಗಿಸುವವರಾದರೆ ಧರ್ಮೋದ್ಧಾರವಾದೀತೆ? ಮತ್ತೆ ಕೆಲವರು ಹೇಳುವಾಗ ಮಾತ್ರ ಧರ್ಮೋದ್ಧಾರ. ರಾಷ್ಟ್ರೋದ್ಧಾರವೆಂದು ಹೇಳುತ್ತಾ ಕಾರ್ಯಾಚರಣೆಯಲ್ಲಿ ಧರ್ಮಾಭಾಸಕರಾಗುತ್ತಿದ್ದಾರೆ. ಮತ್ತೆ ಕೆಲವರಾದರೊ, ಬರೀ ಐಕಮತ್ಯವೆಂಬ ದುರಭಿಮಾನದಿಂದ ಧರ್ಮದ ಕಡೆಗೆ ಲಕ್ಷ್ಯವೇ ಇಲ್ಲದೆ ಬರೀ ಕೂಟದಿಂದ ಮಾತ್ರ ರಾಷ್ಟ್ರೋದ್ಧಾರಕಾರ್ಯವಾಗುವುದೆಂದು ತಿಳಿಯುವರು. ಧರ್ಮೋದ್ಧಾರವಾಗದವಿನಾ ರಾಷ್ಟ್ರೋದ್ಧಾರವಾದರೂ ಎಂದೆಂದಿಗೂ ಆಗಲಾರದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು, (ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ‖ ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ‖) ಎಂಬುದಾಗಿ ಧನಂಜಯನಿಗೆ ಸ್ವಧರ್ಮನಿರತರೇ ನನ್ನ ಭಕ್ತರು. ಅಂತಹ ಧರ್ಮಾತ್ಮರಿಂದಲೇ ರಾಷ್ಟ್ರದ ಉದ್ಧಾರವಾಗುವುದು. ಮುಖ್ಯತಃ ಧರ್ಮವೇ ಸರ್ವ ಶ್ರೇಯಸ್ಸಿಗೂ ಕಾರಣವು ಎಂಬುದಾಗಿ ಅಪ್ಪಣೆಕೊಡಿಸಿರುವನು. ಅಲ್ಲದೆ(ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ‖) ಎಂದರೆ, ಯಾವ ಯಾವಾಗ ಧರ್ಮವು ಕೆಟ್ಟು ಹೋಗುತ್ತದೊ ಆಗಾಗ ಧರ್ಮಸ್ಥಾಪನೆಗಾಗಿಯೇ ತಾನು ಅವತರಿಸುವೆನು ಎಂಬುದಾಗಿಯೂ ಅಪ್ಪಣೆಯನ್ನಿತ್ತಿರುವನು. ಅಂದಮೇಲೆ, ವರ್ಣಾಶ್ರಮಧರ್ಮವೇ ನಾಶವಾಗುತ್ತಿರುವಾಗ, ಧರ್ಮಸ್ವರೂಪಿಯಾದ ರಾಷ್ಟ್ರದೇವತೆಗಾದರೂ ತೃಪ್ತಿಯಾಗುವುದು ಹೇಗೆ, ರಾಷ್ಟ್ರವು ಉದ್ಧಾರವಾಗುವುದಾದರೂ ಹೇಗೆ, ಹೀಗಲ್ಲದೆ ತಲೆಗೆಲ್ಲಾ ಒಂದೇ ಮಂತ್ರವೆಂಬಂತೆ (ಸಂಘೇ ಶಕ್ತಿಃ ಕಲೌ ಯುಗೇ) ಎಂಬುವ ಒಂದೇ ನ್ಯಾಯವನ್ನು ಹಿಡಿದು, ಕಲಿಯುಗದಲ್ಲಿ ಸಂಘದಲ್ಲಿಯೇ ಶಕ್ತಿ, ಸಂಘವೇ ದೇವತಾಸ್ವರೂಪವು, ಸಂಘದಿಂದಲೇ ಸರ್ವಸಾಧನೆಯಾಗುವುದು, ಎಂಬುದಾಗಿ ಬರೀ ಕೂಟದಿಂದ ಕಾರ್ಯವಾಗುವುದೆಂದರೆ, ಪೂರ್ವದಿಂದಲೂ ಕೂಟದಲ್ಲಿ ಒಮ್ಮನಸ್ಸಿನಿಂದಲೇ ಕಾರ್ಯಮಾಡಿದವರಾದರೂ ಅಧರ್ಮಿಷ್ಠರಾಗಿದ್ದುದರಿಂದ, ಭಗ್ನಮನೋರಥರಾದವರ ದೃಷ್ಟಾಂತವು ಐತಿಹಾಸ ಪೌರಾಣ

ಮುಂತಾದ ಆಧಾರಗಳಿಂದ ಸರ್ವರಿಗೂ ತಿಳಿದವಿಷಯವಾಗಿದೆ. ಮತ್ತೆ ಕೆಲವರು, (ಸರ್ವ ಸಮೈಕದೃಷ್ಟಿ) ಎಂಬುದಕ್ಕೆ ಅಪಾರ್ಥಕಲ್ಪನ ಮಾಡಿಕೊಂಡು ಸರ್ವರನ್ನೂ ಸಮಾನಿಕರನ್ನಾಗಿಯೇ ಕಾಣಬೇಕೆಂತಲೂ, ಹಿಂದುಳಿದ ಜನಾಂಗದವರನ್ನು ತುಚ್ಛೀಕರಿಸದೆ ನಮ್ಮಂತೆಯೇ ಭಾವಿಸಿ ಮುಂದೆತರಬೇಕೆಂತಲೂ ಇದರಿಂದಲಾದರೂ ರಾಷ್ಟ್ರೋದ್ಧಾರವಾಗುವುದೆಂತಲೂ ತಮ್ಮ ಅಭಿಪ್ರಾಯವನ್ನು ತಿಳುಹಿಸುವರು. ಸರ್ವರನ್ನೂ ಸಮಾನಿಕರನ್ನಾಗಿ ಕಾಣಬೇಕೆಂಬುದೇನೋ ಎಲ್ಲರೂ ಒಪ್ಪತಕ್ಕಮಾತೇ. ಆದರೂ ತನ್ನಂತೆಯೆ ತನ್ನ ತಾಯಿಯನ್ನೂ, ಹೆಂಡತಿಯನ್ನೂ, ಮಕ್ಕಳನ್ನೂ ಏಕದೃಷ್ಟಿಯಿಂದ ನೋಡಲಾದೀತೆ. ಎಲ್ಲರಲ್ಲಿಯೂ ಒಂದೇ ಭಾವನೆಯಿಂದ ನೋಡಲಾದೀತೆ. ಹೇಗೆ ತಾರತಮ್ಯಭಾವದಿಂದ ಪ್ರೀತಿ ಮಾಡಬೇಕಾಗುತ್ತದೋ. ಅಂತೆ, ಇರಬಹುದಲ್ಲದೆ ಅಪಾರ್ಥಮಾರ್ಗವನ್ನು ಹಿಡಿಯಲು ಸಾಧ್ಯವೆ. ಅಂದ ಮಾತ್ರಕ್ಕೆ ಹಿಂದುಳಿದವರನ್ನು ಅವಿಶ್ವಾಸ ಮಾಡಿ ತುಚ್ಛೀಕರಿಸಬೇಕೆಂಬುದನ್ನು ಯಾರೂ ಒಪ್ಪಲಿಕ್ಕಿಲ್ಲ. ಆದರೆ, ಸ್ಥಾನ ಕಾರ್ಯ ಮುಂತಾಗಿ ಸರ್ವವಿಷಯದಲ್ಲಿಯೂ ತಾರತಮ್ಯವರಿತು ಅಧಿಕಾರವಿರುವಷ್ಟು ಪ್ರೀತಿ ಗೌರವದಿಂದ ಮಾತ್ರ ಕಾಣಬೇಕೆಂಬುವುದೇ ಆರ್ಯರ ಅಭಿಪ್ರಾಯವು. ಇದು ಸಮಂಜಸ ಬುದ್ಧಿಯಿಂದ ವಾಚಕರೇ ಯೋಚಿಸಿ ನ್ಯಾಯಾನ್ಯಾಯಗಳನ್ನು ತಿಳಿದುಕೊಳ್ಳಬಹುದು. ಮತ್ತೆ ಕೆಲವರು ಕೃತ ತ್ರೇತಾದಿಗಳಲ್ಲಿ ಜಾತಿಭೇದವೇ ಇರಲಿಲ್ಲವೆಂಬುದಾಗಿಯೂ ಇದು ಕಲ್ಪಿತವೆಂಬುದಾಗಿಯೂ ದಶರಥ ಜನಕ ಮುಂತಾದವರು ಕ್ಷತ್ರಿಯರಲ್ಲವೆ, ಇವರುಗಳಲ್ಲಿ ವಸಿಷ್ಠ ವಿಶ್ವಾಮಿತ್ರರು ಭೋಜನಾದಿಗಳನ್ನು ಮಾಡುತ್ತಿರಲಿಲ್ಲವೇ, ಎಂಬುವ ಉದಾಹರಣೆಯನ್ನು ತೋರಿಸುವರು. ಯುಗಾಂತರದ ಮಾತು ಮಾತ್ರವಲ್ಲ, ಯುಗಾಂತರದ ಧರ್ಮವು ಕಲಿಯುಗಕ್ಕೆ ಹೋಲಿಸಲಾರದು, ಯುಗ ಯುಗಗಳಿಗೇ ಆಯಾಯ ಯುಗಕ್ಕೆ ತಕ್ಕಂತೆ ಧರ್ಮಗಳು ಬೇರೆ ಬೇರೆಯಾಗಿರುವುದರಿಂದ ಆ ಯುಗಗಳ ಧರ್ಮವು, ಕಲಿಯುಗದಲ್ಲಿ ಆಚರಿಸುವುದಾದರೂ ಹೇಗೆ, ಹಾಗೂ ಅದರಂತೆಯೇ ಅನುಸರಿಸುವಾಗ ಎಲ್ಲವೂ ಅದರಂತೆಯೆ ಅನುಸರಿಸುವುದಾದರೆ

ಆಗಬಹುದು. ವಸಿಷ್ಠ ವಿಶ್ವಾಮಿತ್ರಾದಿಗಳು ಈ ಹೊತ್ತು ಯಾರಿಂದ ಬಂದ ಅನ್ನವನ್ನೂ ಭೋಜನಮಾಡುತ್ತಿದ್ದರು. ನಾಳೆ ಕಾಯಿಸಿದ ಉಕ್ಕಿನ ರಸವನ್ನೂ ಪಾನಮಾಡುತ್ತಿದ್ದರು. ಅವರ ಶಕ್ತಿಯು ನಮ್ಮಲ್ಲಿ ರಲು ನಾವು ಹಾಗೆಯೇ ಮಾಡಬಹುದು. ಶ್ರೀಕೃಷ್ಣನು ಗೊಲ್ಲನಲ್ಲವೆ, ಈ ಗೊಲ್ಲನಿಂದ ಹೇಳಲ್ಪಟ್ಟ ಗೀತೆಯು ಉತ್ತಮ ವರ್ಣದವರೆಂದು ಹೆಮ್ಮೆಯಿಂದ ಹೋರಾಡುವ ಬ್ರಾಹ್ಮಣರಿಗೂ ಸರ್ವಶಾಸನರೂಪವಾದ ಶಾಸ್ತ್ರವಾಗಿಲ್ಲವೆ, ಎಂದರೆ, ಶ್ರೀಹರಿಗೆ ಯಾವ ಜಾತಿ ಕುಲ ಇಂತಹ ಸಾಕ್ಷಿ ಯಾದರೂ ಒಪ್ಪತಕ್ಕದ್ದೆ, ವಾಲ್ಮೀಕಿಯು ವ್ಯಾಧನಲ್ಲವೆ, ವ್ಯಾಧನಿಂದ ಹೇಳಲ್ಪಟ್ಟ ರಾಮಾಯಣವು, ಬ್ರಾಹ್ಮಣರು ಪಾಠ ಪ್ರವಚನಾದಿಗಳನ್ನು ಮಾಡುವ ವ್ಯಾಸಪೀಠದ ಮೇಲೆ ಮಹಾ ಕಾವ್ಯವಾಗಿ ಕುಳಿತು ಪೂಜಿಸಿಕೊಳ್ಳುವುದಿಲ್ಲವೆ, ಎಂದರೆ ವಾಲ್ಮೀಕಿಯು ರಾಮಾಯಣವನ್ನು ಬರೆಯುವ ಕಾಲದಲ್ಲಿ ವ್ಯಾಧನಾಗಿ ಹತ್ಯಾಕಾರ್ಯಗಳನ್ನು ಮಾಡುತ್ತ ಬರೆದಿರುವುದಿಲ್ಲ, ಸ್ವರೂಪ ಜ್ಞಾನಾನಂತರದಲ್ಲಿ ಪರಬ್ರಹ್ಮನನ್ನು ತಿಳಿದು ಬರೆದುದರಿಂದ ಮೇಲೆ ವ್ಯಾಧನು ಬರೆದ ರಾಮಾಯಣವಾಗಲಿಲ್ಲ. ಬ್ರಹ್ಮಜ್ಞಾನಿಯು ಬರೆದುದಾಯಿತು. ಮತ್ತೆ, ಕೆಲವರು, ಬ್ರಾಹ್ಮಣರು ಶೂದ್ರರು ಪಂಚಮರು ಎಂಬುವ ಮೇಲು ಕೀಳುಗಳು ಈಚೀಚೆಗೆ ಬರಬರುತ್ತಾ ಉಂಟಾದುದಲ್ಲದೆ ಹಿಂದೆ ಇರಲೇ ಇಲ್ಲವೆಂಬುವರು, ಪ್ರತಿಯೊಂದು ಪುರಾಣದಲ್ಲಿಯೂ ಬ್ರಾಹ್ಮಣ ಶೂದ್ರ ಚಂಡಾಲ ಎಂಬುವ ಮುಂತಾದ ಶಬ್ದಗಳು ಉಂಟೇ ಉಂಟೆಂದ ಮೇಲೆ ಮೊದಲಿಂದಲೂ ಇದ್ದದ್ದೇ ಎಂದು ಸಿದ್ಧಿತವಾಯಿತು. ಪುರಾಣದ ಮಾತಿರಲಿ ವೇದಗಳಲ್ಲಿಯೂ ವರ್ಣಾಶ್ರಮದ ವಿಚಾರವು ಇರುವುದು.

(ಬ್ರಾಹ್ಮಣೋಽಸ್ಯ ಮುಖಮಾಸೀತ್ | ಬಾಹೂ ರಾಜನ್ಯಃಕೃತಃ ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ)ಎಂಬುದಾಗಿ ಇರುವುದು. ಹಾಗಾದ ಮೇಲೆ ಚತುರ್ವರ್ಣವೂ ಶ್ರೀದೇವರಿಂದಲೇ ಉಂಟಾದುದರಿಂದಮೇಲೆ ದೇವರ ಪಾದ, ಪಾಣಿ, ಮುಖ, ಮೊದಲಾದ ಅವಯವಗಳಿಗೆ ವ್ಯತ್ಯಾಸ ಉಂಟೆ. ಹಾಗಿಲ್ಲದಿರಲು, ಮುಖದಿಂದ ಬಂದ

ಬ್ರಾಹ್ಮಣರಿಗೂ ಹಾಗೆಯೇ ಪಾದದಿಂದ ಬಂದ ಶೂದ್ರರಿಗೂ ಯೋಗ್ಯತೆಗಳ ವ್ಯತ್ಯಾಸಕ್ಕೆ ಕಾರಣವೇನು ಎಂಬುದಾಗಿ ಹೇಳುವರು. ಆದರೆ ಶ್ರೀದೇವರ ಪಾಣಿ, ಪಾದ, ಶಿರಸ್ಸೇ ಮೊದಲಾದ ಅವಯವಗಳಲ್ಲಿ ವ್ಯತ್ಯಾಸವಿಲ್ಲನೆಂದಮಾತ್ರಕ್ಕೆ ಆಯಾಯ ಅಂಗಾಂಗಗಳಿಂದ ಸೃಷ್ಟರಾದವರಲ್ಲಿ ವ್ಯತ್ಯಾಸವಿರಬಾರದೆಂಬುದಲ್ಲವು, ವ್ಯತ್ಯಾಸ ಉಂಟೇ ಉಂಟು. ಹೇಗೆಂದರೆ, ನಾವು ಸೃಷ್ಟಿಕ್ರಮದಿಂದಲೇ ತಿಳಿದುಕೊಳ್ಳಬಹುದು. ಗೋವಿನಿಂದಲೇ ಉತ್ಪತ್ತಿಯಾಗತಕ್ಕ ಬೇರೆ ಬೇರೆಯ ವಸ್ತುಗಳ ಯೋಗ್ಯತೆಯು ಪ್ರತ್ಯಪ್ರತ್ಯೇಕವಾಗಿಯೇ ಇರುವುದು. ಹೇಗೆಂದರೆ, ಹಾಲು ಗೋವಿನಿಂದಲೇ ಉತ್ಪನ್ನವಾಗುವುದು. ಹಾಲು ಪರಮ ಪವಿತ್ರವಾದುದೆಂದು ದೇವರ ಅಭಿಷೇಕವೇ ಮೊದಲಾಗಿ ಔಷಧಾದಿ ಸರ್ವಕ್ಕೂ ಉಪಯೋಗಿಸುತ್ತಾರೆ. ಅದೇ ಗೋವಿನಿಂದಲೇ ಉತ್ಪನ್ನವಾಗುವ ಸಗಣಿ, ಗೋಮೂತ್ರ, ಇವುಗಳ ಉಪಯೋಗಕ್ರಮವೇ ಬೇರೆ, ಇದಕ್ಕಿಂತಲೂ, ಗೋವಿನಿಂದಲೇ ಉತ್ಪನ್ನವಾಗತಕ್ಕುದೆಂದಮಾತ್ರಕ್ಕೆ ರಕ್ತವನ್ನು ಉಪಯೋಗಿಸಲಾದೀತೆ, ಹೇಗೆ ಒಂದೇ ಗೋವಿನಿಂದ ಉತ್ಪನ್ನವಾಗತಕ್ಕ ವಸ್ತುಗಳ ಸ್ಥಾನಭೇದದಿಂದ ಗುಣಭೇದವಾಗಿ ಉಪಯೋಗಕ್ರಮವೂ ಆಯಾಯ ವಸ್ತುಗಳ ಯೋಗ್ಯತೆಯನ್ನನುಸರಿಸಿಕೊಂಡು ಉಂಟೋ, ಹಾಗೆಯೇ ದೇವರ, ಪಾದ, ಪಾಣಿ, ಶಿರಸ್ಸುಗಳಿಂದಲೇ ಉತ್ಪನ್ನರಾದರೆಂದಮಾತ್ರಕ್ಕೆ ಚತುರ್ವರ್ಣದವರಿಗೂ ಸ್ಥಾನವ್ಯತ್ಯಾಸದಿಂದ ಗುಣಯೋಗ್ಯತೆಗಳ ವ್ಯತ್ಯಾಸವು ಉಂಟೇ ಉಂಟು. ಶ್ರೀದೇವರು ಸರ್ವವ್ಯಾಪಿಯೆಂಬುದನ್ನು ವೇದದಲ್ಲಿ ನಂಬಿಕೆಯುಳ್ಳವರೆಲ್ಲರೂ ಒಪ್ಪುವ ಮಾತಾಗಿದೆ. ಆದಮಾತ್ರಕ್ಕೆ, ಹೇಯವಾದ ವಸ್ತುಗಳಲ್ಲಿಯೂ ದೇವರ ವ್ಯಾಪ್ತಿತ್ವವಿದೆ ಎಂಬುದರಿಂದ ಗ್ರಾಹ್ಯವಸ್ತುಗಳಾಗದೆ ಹೇಗೆ ಹೇಯವಾಗಿ ಅಗ್ರಾಹ್ಯಗಳಾಗುವವೋ, ಮಾತ್ರವಲ್ಲ, ಸರ್ವವ್ಯಾಪಿಯಾದ ದೇವರು ನರಕದಲ್ಲಿಯೂ ಒಂದು ರೂಪದಿಂದ ಅಧಿಷ್ಠಾನವಿಶೇಷದಿಂದ ಸನ್ನಿಹಿತನಾಗಿರುತ್ತಾನೆಂದಮಾತ್ರಕ್ಕೆ, ನರಕದಲ್ಲಧಿಷ್ಠಾನರೂಪವಾವುದೊ, ಆ ರೂಪವು ಪೂಜಾರ್ಹವಲ್ಲವು, ವ್ಯತ್ಯಾಸ ಉಂಟೇ ಉಂಟು. ಮತ್ತೆ ಕೆಲವರು (ಜನ್ಮನಾ

ಜಾಯತೇ ಶೂದ್ರಃ ಕರ್ಮಣಾ ಜಾಯತೇ ದ್ವಿಜಃ) ಎಂದಿರುವುದರಿಂದ ಹುಟ್ಟುವಾಗಲೇ ಬ್ರಾಹ್ಮಣನಾಗಿ ಹುಟ್ಟುವುದಿಲ್ಲ. ಕರ್ಮಾಚರಣೆಯಿಂದ ದ್ವಿಜನಾಗಬಹುದೆಂದು, ಸಾಕ್ಷಿಯಾಗಿ ಕ್ಷತ್ರಿಯರಾದ ವಿಶ್ವಾಮಿತ್ರರು, ಬ್ರಹ್ಮಋಷಿಗಳಾಗಲಿಲ್ಲವೆ, ಎಂಬುದಾಗಿ ಹೇಳಬಹುದು. ಎಷ್ಟು ಸಮಾಧಾನಗಳನ್ನು ಹೇಳಿದರೂ, ಕೇಳುವವನಿಗೆ ಹೇಳುವವನು ಅಡಿಯಾಳಿನಂತೆ ಮತ್ತೂ ಮತ್ತೂ ಪ್ರಶ್ನೆಗಳಿದ್ದೇ ಇರುತ್ತವೆ. ಅಸ್ತು, ಪೂರ್ವಾಪರ ವಿಚಾರಪರರಾಗದೆ, ತಮಗೆ ಬೇಕಾದ ವಿಷಯವನ್ನು ಮಾತ್ರ ಹಿಡಿದು ಮಾತಾಡಲು ಫಲವೇನು, ವಿಶ್ವಾಮಿತ್ರರು ಹುಟ್ಟುವಾಗಲೆ ಬ್ರಾಹ್ಮಣನೊ, ಏನೆಂಬುದನ್ನು ವಿಶ್ವಾಮಿತ್ರರ ಜನ್ಮಚರಿತ್ರೆಯಿಂದಲೇ ತಿಳಿಯಬಹುದು. ಬ್ರಾಹ್ಮಣನಾಗಿ ಹುಟ್ಟಿದುದರಿಂದಲೇ ಕೊನೆಗೂ ತಾನು ಬ್ರಾಹ್ಮಣನೆಂದು ಲೋಕಕ್ಕೆ ತಿಳಿಹಿಸಿದುದು ಮಾತ್ರವಲ್ಲದೆ, ಹೊಸದಾಗಿ ಬ್ರಾಹ್ಮಣನಾದುದಲ್ಲ. ಅಂದ ಮೇಲೆ ಐಕಮತ್ಯವನ್ನುಂಟುಮಾಡಬೇಕೆಂದ ಮಾತ್ರಕ್ಕೇ ವರ್ಣಾಶ್ರಮಧರ್ಮ ನಾಶವಾಗುವ ಸನ್ಯವಹಾರಾದಿ ದುರ್ಮಾರ್ಗದ ಐಕಮತ್ಯದಿಂದ ಪ್ರಪಂಚಕ್ಕೆ ಹಾನಿಯಲ್ಲದೆ, ಉಪಕಾರವಾದಂತಾಗಲಿಲ್ಲ. ಸಹೋದರಭಾವದಿಂದ ಚತುರ್ವರ್ಣದವರೂ ಇರಬೇಕೆಂಬುದೇನೋ ಸರ್ವರೂ ಒಪ್ಪತಕ್ಕ ಮಾತೇ. ಧರ್ಮಾಭಾಸವಾಗದ ರೀತಿ ಐಕಮತ್ಯದಿಂದ ಇದ್ದರೆ ಆಗ ರಾಷ್ಟ್ರವು ವೃದ್ಧಿಯಾಗಿಯೇ ಆಗುವುದು. ಹಾಗೂ ಜಾತಿಭೇದವನ್ನೇ ಬಿಟ್ಟು, ಸರ್ವರೂ ಒಂದಾಗಿ ಐಕಮತ್ಯದಿಂದ ಕಾರ್ಯವನ್ನು ಮಾಡಿದರೆ, ಆಗಲಾದರೂ ಕಾರ್ಯಸಾಧನೆಯಾಗುವುದೆ, ಎಂಬುದನ್ನು ವಿಚಾರಮಾಡಿ ನೋಡುವ. ಪ್ರಾಪಂಚಿಕ ದೃಷ್ಟಿಯಿಂದಲೇ ಆಗಲಿ ಐತಿಹಾಸಿಕ ದೃಷ್ಟಿಯಿಂದಲೇ ಆಗಲಿ ವಿಚಾರಮಾಡಲು, ಆಗ ಗೊತ್ತಾಗುವುದು. ಐತಿಹಾಸಿಕ ದೃಷ್ಟಾಂತವೆಂದರೆ, ರಾಮಾಯಣವು. ಲಂಕಾಪಟ್ಟಣದಲ್ಲಿ ಬೇರೆ ಜಾತಿಯೇ ಇರಲಿಲ್ಲ. ಬೇರೆಯ ಮನೋಧರ್ಮವುಳ್ಳ ಮತಾಂತರದವರಾದರೂ ಒಬ್ಬರಿರಬಹುದು. ಜಾತಿಭೇದವೇನೋ ಖಂಡಿತವಾಗಿಯೂ ಇರಲಿಲ್ಲವು. ರಾಕ್ಷಸಜಾತಿಯಾದ ಒಂದೇ ಜಾತಿಯು ಅಲ್ಲಿಯ ಜನಾಂಗವು. ಹೀಗಿದ್ದರೂ ಎಷ್ಟು ಐಕಮತ್ಯದಿಂದ ಕಾರ್ಯಮಾಡಿ

ದರೂ, ಲಂಕೇಶ್ವರನಾದ ದಶಕಂಠನಿಗೆ ಜಯವಾಗಲಿಲ್ಲವೇಕೆ? ಇನ್ನು ಪ್ರಾಪಂಚಿಕ ದೃಷ್ಟಾಂತವೆಂದರೆ, ದ್ವೀಪಾಂತರದಲ್ಲಿ ಜಾತಿಭೇದವೇ ಇಲ್ಲದ ಎಷ್ಟೋ ರಾಜ್ಯಗಳು ಹಾಳಾಗಿವೆ. ಇದಕ್ಕೆಲ್ಲಾ ಕಾರಣವೇನು? ಈ ಕಾರಣಗಳಿಂದ ಹಿಂದುಳಿದವರನ್ನು, ಅಸ್ಪೃಶ್ಯತಾ ನಿವಾರಣೆ ಮಾಡಿ, ಸ್ಪೃಶ್ಯರನ್ನಾಗಿ ಉದ್ಧಾರ ಮಾಡಿ ಸಂಘವನ್ನು ವೃದ್ಧಿಪಡಿಸಿದ್ದರಿಂದಲೇ ರಾಷ್ಟ್ರೋದ್ಧಾರವಾಗುವುದೆಂದು ಹೇಳುವ ಇವರ ಮಾತಾದರೂ, ಎಷ್ಟು ಫಲಕಾರಿಯಾದುದೆಂಬ ವಿಷಯವನ್ನು ವಾಚಕರೇ ಊಹಿಸಬಹುದು. ಪರಂತು, ದೇಶದ ಜನಾಂಗವೆಂದರೆ, ಎಲ್ಲರೂ ಸಹೋದರ ಪ್ರೀತಿಯಿಂದ ಇರಬೇಕೆಂಬುದು ಸಹಜವು. ಮನುಷ್ಯದೇಹವೇ ನಿದರ್ಶನವಾಗಿರುವುದು. ದೇಹಕ್ಕೆ ಅಂಗಾಂಗಗಳು ಹೇಗೋ, ರಾಜ್ಯಕ್ಕೆ ಜನಾಂಗವೂ ಹಾಗೆಯೇ. ಯಾವ ಅವಯವದ ಲೋಪವಿದ್ದಾಗ್ಯೂ, ಅಂಗಹೀನನೇ ಆಗುವಂತೆ, ರಾಷ್ಟ್ರದಲ್ಲಿ ಯಾವ ಜನಾಂಗವು ಹೀನಸ್ಥಿತಿಯಲ್ಲಿದ್ದರೂ, ರಾಜ್ಯಕ್ಕೆ ಅಂಗಹೀನವಾದಂತೆಯೇ ಸರಿ. ಪರಂತು, ಆಯಾಯ ಅಂಗಗಳು ಇರತಕ್ಕ ನಿಯತ ಸ್ಥಾನದಲ್ಲಿ ಇದ್ದು ನಿಯತವಾದ ಕಾರ್ಯಗಳನ್ನು ಮಾಡುತ್ತಾ ಬರಲು ಹೇಗೆ ದೇಹದ ಬೆಳವಣಿಗೆಗೂ, ಭೂಷಣಕ್ಕೂ ಕಾರಣವಾಗುತ್ತೆಯೋ, ಅಂತೆ, ಆಯಾಯ ಜನಾಂಗದವರಿಗೆ ಪರಮಾತ್ಮನಿಂದ ನಿಯಮಿಸಲ್ಪಟ್ಟ ಹಕ್ಕು ಬಾಧ್ಯತೆಗಳಿಗೆ ತಕ್ಕಂತೆ ತಮ್ಮ ತಮ್ಮ ನಿಯತಕಾರ್ಯದಲ್ಲಿ ತಾವು ಮುಂದಾಳುಗಳಾಗಿ ಕಾರ್ಯಸಾಧನೆಯನ್ನು ಮಾಡುತ್ತಿರಲು ರಾಜ್ಯದ ಏಳಿಗೆಗೂ ಕಾರಣವಾಗುತ್ತದೆ. ಯಾವ ಅಂಗದಿಂದ ಯಾವ ಕಾರ್ಯವು ಮಾಡತಕ್ಕದ್ದೋ, ಆ ಅಂಗದಿಂದ ಆ ಕಾರ್ಯವನ್ನು ಮಾಡಿದುದರಿಂದ ಅವಮಾನವೆಂದಾಗಲಿ ಯೋಗ್ಯತೆ ಕಡಿಮೆ ಎಂದಾಗಲಿ ಹೇಳುವುದಕ್ಕಾದೀತೆ, ಹಾಗೆಯೇ, ವರ್ಣಾಶ್ರಮಧರ್ಮಸಮ್ಮತವಾದ ಕಾರ್ಯವನ್ನು ಮಾಡಿದ ಮಾತ್ರಕ್ಕೆ ಎಂದಿಗೂ ಅಪಮಾನವಲ್ಲ. ಹಾಗಲ್ಲದೆ ಎಲ್ಲಾ ಅಂಗಗಳಿಂದಲೂ ಪ್ರತಿಯೊಂದು ಕಾರ್ಯವನ್ನೂ ಮಾಡಿಸಲಾದೀತೆ, ಕಣ್ಣೇ ನೋಡುತ್ತಿರುವ ಕಾರ್ಯಮಾಡತಕ್ಕದ್ದೇಕೆ? ಕೆಲಕಾಲ ಕಣ್ಣಿಗೆ (ರಜೆ) ಅವಕಾಶ ಕೊಟ್ಟು, ಕಿವಿಯಿಂದಲಾಗಲಿ, ಮೂಗಿನಿಂದಲಾಗಲಿ ಕಣ್ಣಿನ ಕೆಲಸವನ್ನು

ಮಾಡಿಸುವ ಎಂದರೆ ಸಾಧ್ಯವೆ, ಎಲ್ಲಾ ಅಂಗಗಳು ಸಮಾನ ಯೋಗ್ಯತೆಗಳುಳ್ಳವುಗಳೇನೋ ಸಹಜವೆ ಅಂದಮಾತ್ರಕ್ಕೆ ಒಂದೇ ಸ್ಥಾನದಲ್ಲಿ ಇರಲಾದೀತೆ, ಒಂದು ವೇಳೆ, ಅಪರೂಪವಾಗಿ ಸಾಮಾನ್ಯವಾಗಿ ಅಂಗವ್ಯತ್ಯಾಸಗಳಿರಬಹುದು. ಇದ್ದ ಮಾತ್ರಕ್ಕೆ ಲೋಕವಿರುದ್ಧವಾಗಿದೆ ಎಂಬುದಾಗಿ ಎಲ್ಲರೂ ಹೇಳುವವರಲ್ಲದೆ, ಇದೇ ಸರಿ, ಎನ್ನುವರೆ? ಅಂಗಾಂಗಗಳಲ್ಲ ಕೆಲವು ಕೆಳಗೆ, ಕೆಲವು ಮೇಲಿದ್ದಮಾತ್ರಕ್ಕೆ ದೇಹಕ್ಕೆ ಯಜಮಾನನಾದ ಆತ್ಮನಿಗೆ ಎಲ್ಲಾ ಅಂಗಗಳಲ್ಲಿಯೂ ಏಕರೀತಿಯಾದ ಅಭಿಮಾನವಿರುವುದಲ್ಲದೆ, ಕೆಳಗಿರತಕ್ಕ ಕಾಲು, ಇದಕ್ಕೆ ನೋವಾದರೂ ಆಗಲಿ, ಉತ್ತಮಾಂಗವಾದ ಶಿರಸ್ಸಿಗೆ ಮಾತ್ರ ನೋವಾಗದಿರಲು ಸಾಕು, ಎಂಬ ಪಕ್ಷಪಾತ ಉಂಟೆ. ಹಾಗೆಯೆ ರಾಷ್ಟ್ರದ ಯಜಮಾನನಾದ ಧಾರ್ಮಿಕ ರಾಜನು, ಮೇಲು ಕೀಳುಗಳೆಂದು ಪಕ್ಷಪಾತಬುದ್ಧಿಯಿಂದ ಪ್ರೀತಿ, ಔದಾಸೀನ್ಯಾದಿಗಳನ್ನು ರಾಜ್ಯದ ಜನಾಂಗವಾದ ಪ್ರಜೆಗಳಲ್ಲಿ ತೋರಿಸಲಾರನು. ಹಾಗಲ್ಲದೆ, ಕಾಲು ಯಾವಾಗಲೂ ಕೆಳಗೇ ಇರಬೇಕೆ? ಇದನ್ನು ಹೇಗಾದರೂ ಮೇಲಕ್ಕೆ ತರಬೇಕೆಂದು ಯೋಚಿಸುವುದಾದರೆ, ತಲೆಕೆಳಗಾಗುವುದು. ಆಗ ನಡೆಯಲು ಸಾಧ್ಯವೆ? ಅಥವಾ ಹಠಪ್ರಯತ್ನ ಮಾಡಿದಾಗ್ಯೂ, ಅಂಗಸಾಧಕರು ತಲೆಕೆಳಗಾಗಿ ನಡೆದಂತೆ, ಸ್ವಲ್ಪಕಾಲವಲ್ಲದೆ, ಹಾಗೆಯೇ ಕೊನೆಯವರಿಗೂ ನಡೆಯಲಾದೀತೆ. ಕಾಲು ಕಾಲೇ ತಲೆ ತಲೆಯೆ, (ಸ್ಥಾನ ಏವ ನಿಯೋಜ್ಯಂತೇ ಭೃತ್ಯಾಶ್ಚಾಭರಣಾನಿ ಚ | ನಹಿ ಚೂಡಾಮಣಿಃ ಪಾದೇ ನೂಪುರಂ ಶಿರಸಾ ಕೃತಮ್ ||)ಎಂದಿರುವುದು. ಕಾಲಿಗೂ ಗೌರವವನ್ನು ಕೊಡಿಸಬೇಕೆಂಬುದರಿಂದ, ಶಿರೋಭೂಷಣವಾದ ಚೂಡಾಮಣಿಯನ್ನಾಗಲಿ, ಮುಂಡಾಸನ್ನಾಗಲಿ ಕಾಲಿಗೆ ಅಲಂಕರಿಸಲು, ಪಾದಭೂಷಣವಾದುದು ತಲೆಯ ಮೇಲೆ ಬಂದು ಕೊಡಬೇಕಾಗುತ್ತದೆ. ಸರ್ವಾಂಗವೂ, ಸಮಾನವಾದುದಾದರೂ, ವರಾಂಗವೆಂಬುವ ಕೀರ್ತಿಯು ಶಿರಸ್ಸಿಗೆ ಮಾತ್ರ ಇರುವುದು. ಏತಕ್ಕೆಂದರೆ, ಸರ್ವ ಅಂಗಗಳಿಂದಲೂ ಕಾರ್ಯಮಾಡಿಸುವ ಬುದ್ಧಿಯೆಂಬ ಶಕ್ತಿಯುಕ್ತವಾದ ಅಧಿಕಾರವನ್ನು ಸೃಷ್ಟಿಸಿಯುಮದಲ್ಲಿ ಈ ಶಿರಸ್ಸಿಗೆ ಕೊಟ್ಟಿರುವುದರಿಂದ

ಉತ್ತಮಾಂಗವಾಗಿದೆ. ಹಾಗೆಯೇ ಎಲ್ಲಾ ವರ್ಣಾಶ್ರಮದವರೂ ರಾಷ್ಟ್ರಕ್ಕೆ ಸಮಾನಿಕರೇ ಆದಾಗ್ಯೂ, ವರ್ಣಾಶ್ರಮದ ಅಧಿಕಾರವನ್ನು ಹೊಂದಿಕೊಂಡು ವ್ಯತ್ಯಾಸವು ಉಂಟೇ ಉಂಟು. ಅಂದಮಾತ್ರಕ್ಕೆ, ಅಂಗಾಂಗಗಳಲ್ಲಿ ದ್ವೇಷಬುದ್ಧಿ ಇಲ್ಲ. ಯಾವ ಅಂಗಕ್ಕೆ ಹಿಂಸೆಯಾದರೂ ಪ್ರತಿಯೊಂದು ಅಂಗವೂ ಆ ಅಂಗದ ಯೋಗಕ್ಷೇಮ ವಿಚಾರದಲ್ಲಿ ಸಹಾಯಕವಾಗಿ ಮಿತ್ರತ್ವದಿಂದಲೇ ಇರುವುದಲ್ಲದೆ, ದ್ವೇಷವಿಲ್ಲ. ದೇಹದ ಯಾವ ಭಾಗದಲ್ಲಿ ನವೆಯಾದರೂ, ಕೈಗಳು ತುರಿಸುವುದರಲ್ಲಿ ಸಹಾಯಕವಾಗುವವಲ್ಲದೆ ಇದು ಕೇವಲ ಅಸಹ್ಯವಾದ ಸ್ಥಾನವು. ಈ ಪ್ರದೇಶವನ್ನು ತಾನು ತುರಿಸಲಿಕ್ಕಿಲ್ಲನೆಂದಾಗಲಿ, ಅಥವಾ, ತುರಿಸುವುದರಿಂದ ತನಗೇನು ಪ್ರಯೋಜನವೆಂದು ಉಗುರುಗಳು ಸಹಾಯಮಾಡದೆಯಾಗಲಿ ಇರುವುದಿಲ್ಲ. ಹಾಗೆಯೇ ರಾಜಾಂಗಭೂತರಾದ, ಸರ್ವರೂ ಮೈತ್ರ್ಯದಿಂದ, ಒಬ್ಬರಿಗೊಬ್ಬರು ಸಹಾಯಕರಾಗಿ, ಇರಲೇ ಬೇಕಲ್ಲದೆ, ದ್ವೇಷಾಸೂಯೆಗಳನ್ನು ಮಾಡತಕ್ಕದ್ದಲ್ಲವು. ಇದಕ್ಕಾಗಿ ಪಂಚಮರಲ್ಲಿ ಪ್ರೀತಿ, ಪಂಚಮೋದ್ಧಾರವೆಂಬುದಾಗಿ ನಮ್ಮ ಕಾಲದಲ್ಲಿ ನಾವು ಹೊಸದಾಗಿ ಸಂಘಗಳನ್ನೇರ್ಪಡಿಸಬೇಕಾದುದಿಲ್ಲ. ಸೃಷ್ಟ್ಯಾದಿಯಿಂದಲೂ ಆರ್ಯರ ರಕ್ತಕಣಗಳಲ್ಲಿ, (ಅಹಿಂಸಾ ಪರಮೋ ಧರ್ಮಃ) ಎಂಬುವ ಮೂಲಸೂತ್ರಾರ್ಥದ, ಭೂತದಯೆ ಪಶ್ಚಾತ್ತಾಪವು ಸ್ವಾಭಾವಿಕವಾಗಿ ಉಂಟೇ ಉಂಟು. ಎಷ್ಟು ನಶಿಸಿಹೋಗಿದ್ದರೂ, ಬೂದಿಮುಚ್ಚಿದ ಕೆಂಡದೋಪಾದಿಯಲ್ಲಿ ಈ ಗುಣವು ಉಂಟೇ ಉಂಟು. ಇದಕ್ಕೆ ಸಾಕ್ಷಿಯಾಗಿ, ನಮಗೆಲ್ಲಾ ಪರಮ ಪೂಜ್ಯಸ್ಥಾನದಲ್ಲಿರುವ ಶ್ರೀಪುರಂದರದಾಸಾರ್ಯರು, ತಮಗೆ ಪಂಚಮರಲ್ಲಿ ಎಷ್ಟು ಸಹಾನುಭೂತಿಇದ್ದಿತೆಂಬುದನ್ನು ತಮ್ಮ ಪದ್ಯಗಳಿಂದ ತಿಳುಹಿಸಿರುತ್ತಾರೆ. ಹೇಗೆಂದರೆ:----

ರಾಗ ಕೇತಾರಗೌಳ, ಝುಂಪೆತಾಳ.

(ಹೊಲೆಯ ಹೊರಗಿಹನೆ । ಊರೊಳಗಿಲ್ಲವೇ । ಶ್ರೀಹರಿಯ ಸ್ಮರಣೆಯನು । ಬಲ್ಲವರು ಹೇಳೀ ॥ ಪಲ್ಲ ॥ ಅರಿತು ಆಚಾರವನು । ನಡೆಸದಾತನೆ ಹೊಲೆಯ । ಪರಸತಿಗೆ ಅಳಕುವವ ಪಾಪಿ ಹೊಲೆಯ ॥ ಗುರುಹಿರಿಯರನು

ಕಂಡು ಭಜಿಸದಾತನೆ ಹೊಲೆಯು । ಪುರಂದರ ವಿಠಲನ್ನ ನೆನೆಯದವ ಹೊಲೆಯಾ ॥)

ಮತ್ತೊಂದು ಕಡೆಯಲ್ಲಿಯೂ ಈ ರೀತಿ ಹೇಳಿದ್ದಾರೆ.

(ಹೊಲೆಯು ಬಂದಾನೆಂದು ದೇವರ । ಗಣ ಗಣ ಗಂಟೆಯು ಚೀರಿಸುತ್ತಿಹೆ । ತನುವಿನ ಕೋಪವು ಹೊಲೆಯಲ್ಲವೆ । ಮದಮತ್ಸರಂಗಳು ಹೊಲೆಯಲ್ಲವೆ । ಪರ ಧನ ಪರ ಸತಿ ಹೊಲೆಯಲ್ಲವೆ । ಹೊರಗಿದ್ದ ಹೊಲೆಯನ್ನ ಒಳಗೆ ಬಚ್ಚಿಟ್ಟುಕೊಂಡು । ಹೊರಗಿನ ಹೊಲೆಯನ್ನ ಕಂಡು ಕೂಗುವುದೇಕೋ । ಇದ ನೋಡಿ ನಗುತಾನೆ ಪುರಂದರ ವಿಠಲ)

ಎಂಬದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಅಂದರೆ, ನೀನು ಇಂಥಹ ಕರ್ಮಚಂಡಾಲನಾಗಬೇಡ ಎಂದಹಾಗಾಯಿತು. ಅರ್ಥಾತ್ ಪಂಚಮರನ್ನು ಉದ್ಧಾರವಮಾಡಬೇಕಾದರೆ ನಾವು, ಪಂಚಮರಾಗದೆ ಇರಬೇಕು. ಆದುದರಿಂದ, ಹಿಂದುಳಿದವರನ್ನು ಮುಂದೆ ತರಬೇಕೆಂದು ನಾವು ಹಿಂದಾಗಬೇಕಾದುದಿಲ್ಲ. ಕೆಳಗಿನ ತರಗತಿಯ ವಿದ್ಯಾರ್ಥಿಯನ್ನು ಮೇಲಿನ ತರಗತಿಗೆ ತರಬೇಕಾದಪಕ್ಷದಲ್ಲಿ, ಮೇಲಿನ ತರಗತಿಯ ವಿದ್ಯಾರ್ಥಿಯು ಕೆಳಗಿನ ತರಗತಿಗಿಳಿದು ತನ್ನ ಪಾಠವನ್ನು ಮರೆಯಬೇಕಾದುದಿಲ್ಲ. ಮಾತ್ರವಲ್ಲ, ಸಾಮಾನ್ಯ ಮನುಷ್ಯಮಾತ್ರದವನಿಗೆ, ಹೀನಸ್ಥಿತಿಯಲ್ಲಿರುವವರನ್ನು ಕಂಡರೆ, ಅಯ್ಯೋ, ಪಾಪ, ಎನ್ನುವಷ್ಟಾದರೂ ಕನಿಕರವೂ ಇದ್ದೇ ಇರುವುದು. ಆದರೆ, ವರ್ಣಸಾಂಕರ್ಯವಾಗದ ರೀತಿಯಿಂದ ಹಿಂದುಳಿದ ಜನಾಂಗದವರನ್ನು ಮುಂದೆ ತರಬೇಕಾದುದೇ ಸಹಜ. ಧರ್ಮವಿರೋಧವಾದ ವರ್ಣಸಾಂಕರ್ಯಕ್ಕೆ ಮಾತ್ರ ಅವಕಾಶ ಕೊಡಲಾಗದೆಂಬುದು ಆರ್ಯಪದ್ಧತಿಗಾಮಿಗಳ ಅಭಿಪ್ರಾಯವಲ್ಲದೆ, ಪಂಚಮರಲ್ಲಿ ದ್ವೇಷವಾಗಲೀ ಮತ್ಸರವಾಗಲೀ ಮಾಡಬೇಕೆಂದು ಎಂದಿಗೂ ಇರಲಾರದು. ರಾಷ್ಟ್ರದ ಏಳಿಗೆಗೆ ಕ್ರಮವಾದ ವರ್ಣಾಶ್ರಮಧರ್ಮವೇ ಕಾರಣವು. ರಾಷ್ಟ್ರದಹೀನಸ್ಥಿತಿಗೂ, ಸಾಂಕ್ರಾಮಿಕ ರೋಗಾದಿಗಳಿಗೂ, ಅಕಾಲ ಮರಣವೇ ಮುಂತಾದ ಉತ್ಪಾತಗಳಿಗೂ, ಮುಖ್ಯತಃ ರಾಷ್ಟ್ರವು ಸರ್ವವಿಧದಿಂದಲೂ ದುಃಖಮಯವಾಗುವುದಕ್ಕೆ ವರ್ಣಾಶ್ರಮಧರ್ಮತ್ಯಾಗವೇ ಕಾರಣವೆಂಬ ವಿಷ

ಯವು ಮಾರ್ಕಂಡೇಯ ಮೈತ್ರೇಯರ ಸಂವಾದದಲ್ಲಿ ನೋಡಲು ಸ್ಪಷ್ಟ ವಾಗಿ ಹೇಳಿರುವರು. ಇಂತಹ ಇಹಪರಗಳ ಸಕಲ ಸಾಧನಕ್ಕೂ ಕಾರಣ ಭೂತವಾದ ವರ್ಣಾಶ್ರಮಧರ್ಮವನ್ನು ಕಾಪಾಡಲು ನಾವು ದೃಢಸಂಕಲ್ಪ ದಿಂದ ಪ್ರಯತ್ನಪಟ್ಟು ಟೊಂಕಕಟ್ಟಿ ಸಿದ್ಧರಾಗಿ ನಾವು ಪ್ರತಿಯೊಬ್ಬರೂ ಒಬ್ಬರಿಗೊಬ್ಬರು ಶರಗೊಡ್ಡಿ ಪ್ರಾರ್ಥಿಸಿಯಾದರೂ ವರ್ಣಾಶ್ರಮಧರ್ಮ ಪರಿಪಾಲನೆಯ ವಿಚಾರದಲ್ಲಿ, ಮನಸ್ಸುಮಾಡುವಂತೆ ಯತ್ನಮಾಡುತ್ತೇ ವೆಯೋ ಅಂದಿಗೆ ಸರ್ವವಿಧದಿಂದಲೂ ನಾವು ಜಯಶಾಲಿಗಳೇ ಆಗುತ್ತೇ ವೆಂಬುದರಲ್ಲಿ ಸಂಶಯವಿಲ್ಲವು.

॥ ಶ್ರೀಮಧ್ವಪತಯೇ ನಮಃ ॥

ಒಂಭತ್ತನೆಯ ತರಂಗ.

ಶಾಸ್ತ್ರವಿಮರ್ಶೆ, ಅಥವಾ, ಸತ್ಪಥ.

ಧರ್ಮಕ್ಕೆ ಕಂಟಕಉಂಟಾಗುವ ಕಾಲವೇ ಸಜ್ಜನರುಗಳಿಗೆ ದುಃಖ ಮಯವಾದ ಕಾಲ. ಇಂತಹ ದುರ್ನಿವಾರಕಾಲವು ಕಲಿಯುಗದಲ್ಲಂತೂ ವಿಶೇಷಾಕಾರದಿಂದ ಒದಗುವುದೇನು ಅತಿಶಯವಲ್ಲ. ಕಲಿಪ್ರಾಬಲ್ಯದಿಂದ ನಾಸ್ತಿಕಮತದ ಮೂಲಮಂತ್ರವಾದ, ನಿರೀಶ್ವರ ವಾದವೇ ಪ್ರಾಬಲ್ಯಕ್ಕೆ ಬಂದು ದುರ್ಮತೀಯರ ಸಂಸರ್ಗದೋಷ ನಿಮಿತ್ತದಿಂದ ಸಾತ್ವಿಕ ಜೀವ ರುಗಳಿಗೂ ಕೂಡ, ಹಾಗೋ, ಹೀಗೋ, ಎಂಬುವ ಅನುಮಾನಕ್ಕಾರಂಭ ವಾಗಿ ನಿರೀಶ್ವರವಾದ ವಾತಾವರಣ ಬಲದಿಂದ ಸಂದೇಹ ವಿಪರೀತಜ್ಞಾ ನಾದಿಗಳು ಅಂಕುರಿಸಲಾರಂಭಿಸಲು, ಬರಬರುತ್ತ ಆಸ್ತಿಕಮತವು ನಾಮಾ ವಶೇಷವಾಗುವಷ್ಟು ದುರ್ಘಟಪ್ರಸಂಗ ಒದಗಿದ ಈ ದುಷ್ಕಾಲದಲ್ಲಿಯೂ ನಾಸ್ತಿಕಮತ ಬೋಧಕರ ದುಶ್ಶಾಸ್ತ್ರದ ಅಲೆಯ ಬಡಿತಕ್ಕೆ ಹೇಗೋ ಸಿಕ್ಕಿಬೀಳದೆ ಉಳಿದ ಕೆಲವು ಸಜ್ಜನರುಗಳು ಮಾತ್ರ ದಿಕ್ಕುತೋಚದವರಾಗಿ ಮುಂದೆ ತಮ್ಮ ಗತಿಯೇನೆಂಬುದನ್ನರಿಯದೆ, ಹಂಬಲಿಸುತ್ತಿರಲು, ಭಾರ ತೀಯರಲ್ಲಿ ಸಾತ್ವಿಕರಾದವರ ಗೋಳನ್ನು ಕೇಳಿ ದೇವತೆಗಳು ಶ್ರೀಹರಿ ಯಲ್ಲಿ ವಿಜ್ಞಾಪಿಸಿಕೊಳ್ಳಲು ಆಗ ಶ್ರೀಹರಿಯು ತನ್ನನುಗ್ರಹಕ್ಕೆ ಪಾತ್ರರಾ

ಗಲರ್ಹರಾದ ಸುಜೀವಿಗಳೂ ಕೂಡ, ದುರ್ಜನರ ಸಂಸರ್ಗ, ದುಷ್ಟರ ಅವಾಂತರ, ದೈತ್ಯಾವೇಶಬಲಯುಕ್ತರಾದ ದುರ್ಮತಪ್ರಚಾರಕರ ಗೊಂದಲಗಳಿಂದ, ದುಃಖಭಾಗಿಗಳಾಗಿ ಅಜ್ಞಾನಸಂಪನ್ನರಾಗಿ ಕೆಟ್ಟುಹೋದಾರೆಂಬುದರಿಂದ ಕರುಣಾಸಮುದ್ರನಾದ ಶ್ರೀಹರಿಯು ಯೋಚಿಸಿ, ಸಜ್ಜನರ ಮನಸ್ಸಿಗೆ ತಗಲಿರುವ ನಿರೀಶ್ವರ ಜ್ಞಾನಸಾಂಕ್ರಾಮಿಕ ಜಾಡ್ಯರೂಪವಾದ ಅಂಧಕಾರವನ್ನು ಹೋಗಲಾಡಿಸಿ, ಅಸ್ತಿಕಮತಕ್ಕೆ ಮೂಲಮಂತ್ರವಾದ ಈಶ್ವರಕರ್ತೃತ್ವ ಜ್ಞಾನರೂಪವಾದ ಔಷಧವನ್ನಿತ್ತು ಸುಜ್ಞಾನವೆಂಬ ಬೆಳಕಿನಿಂದ ಅಂಧಕಾರದಿಂದ ಪಾರುಮಾಡುವಂತೆ ತನ್ನ ಭಕ್ತಶ್ರೇಷ್ಠರಾದ ಶ್ರೀವಾಯುದೇವರಿಗೆ ಆಜ್ಞಾಪಿಸಿದನು. ಭಗವದಾಜ್ಞಾಧಾರಕರಾದ ಶ್ರೀವಾಯುದೇವರು ಸುಮಾರು ಎಂಟುನೂರು ವರುಷದ ಹಿಂದೆ ಪುಣ್ಯಭೂಮಿಯಾದ ಭರತಖಂಡದ ಪಶ್ಚಿಮಸಮುದ್ರದ ತಟದಲ್ಲಿರುವ ಪರಮಪಾವನ ಕ್ಷೇತ್ರವೆಂದೆನಿಸಿದ ಶ್ರೀರಜತಪೀಠಕ್ಷೇತ್ರದ ಸಮೀಪದಲ್ಲಿರುವ ಪಾಜಕಕ್ಷೇತ್ರವೆಂಬುವ ಗ್ರಾಮದಲ್ಲಿ ವಾಸವಾಗಿರುತ್ತಿದ್ದ ಸಾಧುವರ್ಯರಾದ ಮಧ್ಯಗೇಹಭಟ್ಟರಲ್ಲಿ ವಾಸುದೇವಾಭಿಧಾನದಿಂದ ಅವತರಿಸಿದರು. ಭಾರತೀಪತಿಗಳಾದ ಇವರು ಪೂರ್ಣಪ್ರಜ್ಞರೆಂಬ ಅನ್ವರ್ಥಕನಾಮದಿಂದ ತುರ್ಯಾಶ್ರಮ ಸ್ವೀಕಾರಮಾಡಿ ಜಗದ್ವಿಖ್ಯಾತರಾಗಿ ಸಜ್ಜನರ ಉದ್ಧಾರಕಾರ್ಯವನ್ನು ಯಾವ ರೀತಿಯಿಂದ ಮಾಡಿದರೆಂದರೆ, ಸಜ್ಜನರ ಸಾಧನಕ್ಕೆ ಮುಖ್ಯವಾದುದು ಈಶ್ವರಕರ್ತೃತ್ವಜ್ಞಾನ. ಇಂತಹ ಈಶ್ವರಕರ್ತೃತ್ವಜ್ಞಾನಕ್ಕಾದರೋ ಆಧಾರಭೂತವಾದುವು ವೇದಶಾಸ್ತ್ರಾದಿಗಳು, ಇಂತಹ ವೇದಕ್ಕೇ ಅಪಾರ್ಥಾಪಾದನಮಾಡುವ ದುಶ್ಶಾಸ್ತ್ರಗಳನ್ನು ರಚಿಸಿ ಪ್ರಪಂಚವನ್ನು ಹಾಳುಮಾಡುತ್ತಿರುವ ದುಷ್ಟರ ಉಪದ್ರವವನ್ನು ತಪ್ಪಿಸಬೇಕಾದರೆ ಸಚ್ಛಾಸ್ತ್ರ ಒಂದಲ್ಲದೆ ಬೇರೆಯ ಮಾರ್ಗವಿಲ್ಲವಾದುದರಿಂದ ಶ್ರುತಿಸಮ್ಮತವಾದ ಆಸ್ತಿಕಮತಕ್ಕೆ ಮೂಲಮಂತ್ರವಾದ ಈಶ್ವರಕರ್ತೃತ್ವ ಜ್ಞಾನಪ್ರತಿಪಾದಕವಾದ ಸುಶಾಸ್ತ್ರವನ್ನು ರಚಿಸಿಕೊಟ್ಟು, ಸಾತ್ವಿಕ ಜೀವರುಗಳ ಮನಸ್ಸಿನ ಮೇಲಿರುವ ನಿರೀಶ್ವರವಾದ ರೂಪಾಂಧಕಾರವನ್ನು ಹೋಗಲಾಡಿಸಿ ಸುಜ್ಞಾನವೆಂಬ ಬೆಳಕನ್ನು ತೋರಿಸಿ ಜಗ

ದುದ್ಧಾರಕಾರ್ಯ ಮಾಡಿದರು. ಪರಂತು, ದೇವತೆಗಳಿಂದಲೂ ಗಹನವಾದ ಶ್ರೀಮದಾನಂದತೀರ್ಥರ ಶಾಸ್ತ್ರದ ಅರ್ಥವಾದರೂ ಮನುಷ್ಯಮಾತ್ರದವರಿಗೆ ಆಗುವುದಾದರೂ ಹೇಗೆ? ಹೀಗಿರಲು ಸಜ್ಜನರು ಹಿಂದುಮುಂದು ತೋರದವರಾಗಿ ಡೋಲಾಯಮಾನಚಿತ್ತವೃತ್ತಿಯಿಂದ ಯೋಚಿಸುತ್ತಿರಲು, ದೇವತೆಗಳೇ ಒಂದೊಂದು ರೂಪದಿಂದ ಆಚಾರ್ಯರ ಶಿಷ್ಯಪ್ರಶಿಷ್ಯರಾಗಿ ಅವತರಿಸಿ ಶ್ರೀಮದಾಚಾರ್ಯರ ಶಾಸ್ತ್ರಕ್ಕೆ ಟೀಕಾಕಾರರಾದರು. ಹಾಗೂ ಕಠಿನವಾಗಿರಲು ಮತ್ತುಳಿದ ದೇವತೆಗಳು ಅವತರಿಸಿ ಟಿಪ್ಪಣಿಗಳನ್ನು ಮಾಡಿ ಸಹಾಯಕರಾದರು. ಈ ಸುಶಾಸ್ತ್ರಾವಲೋಕನ ಬಲದಿಂದ ಸುಜೀವಿಗಳಾದನೇಕರು ಶ್ರೀಹರಿಯ ಅನುಗ್ರಹಕ್ಕೆ ಭಾಜನಭೂತರಾಗುತ್ತ ಬಂದರು.

॥ ಶ್ರೀಪಾಂಡುರಂಗವಿಠಲಾಯ ನಮಃ ॥

ಹತ್ತನೆಯ ತರಂಗ.

ಪುರಂದರದಾಸರು.

ಹೀಗೆ ಕೆಲವು ಕಾಲವು ಕಳೆಯುತ್ತಾ ಬರಲು ಪುನಃ(ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ)ಎಂದರೆ, ಗರ್ಭದಲ್ಲಿ ಯಾರು ರಕ್ಷಕನೊ ಅವನೇ ಯಾವಾಗಲೂ ರಕ್ಷಕನಾಗಿರುವನು ಎಂಬುವ ಭಾಗವತಾರ್ಥದಲ್ಲಿ ನಂಬುಗೆಯು ಕಡಿಮೆಯಾಗುತ್ತ ಬಂದಹಾಗೆಲ್ಲಾ ಜನಗಳಿಗೆ ತಮ್ಮ ಹೊಟ್ಟೇಪಾಡಿಗೇನು ಗತಿ, ತಮ್ಮ ಹೊಟ್ಟೆಗೆ ತಾವೇ ಸಂಗ್ರಹಿಸಿಕೊಳ್ಳಬೇಕೆಂಬುವ ಯೋಚನೆಯು ಪ್ರಾರಂಭವಾಯಿತು. ಈ ಮಧ್ಯೇ ದೇವಭಾಷೆಯಾದ ಸಂಸ್ಕೃತಭಾಷೆಯಿಂದ ಸಂಪಾದನೆಗೆ ಮಾರ್ಗವಿಲ್ಲವೆಂತಲೂ ಸಂಸ್ಕೃತವನ್ನು ಅಭ್ಯಾಸಮಾಡಿದ ಜನಗಳಲ್ಲಿ ಪೂಜ್ಯಭಾವವೇ ಇರುವುದಿಲ್ಲವೆಂತಲೂ ಸಂಸ್ಕೃತವೆಂದರೆ ಭಿಕ್ಷೆಬೇಡುವ ವಿದ್ಯೆಯೆಂತಲೂ ಹೀಗೆ ನಾನಾ ಪ್ರಕಾರವಾಗಿ ದೇವಭಾಷೆಯಲ್ಲಿ ಅಗೌರವ ಬುದ್ಧಿಯು ಉತ್ಪನ್ನವಾಗಿ ಉದರಂಭರಣಕ್ಕಾಗಿಯೇ ವಿದ್ಯಾಭ್ಯಾಸವೆಂಬುವಷ್ಟು ವಿದ್ಯೆಯು ಹೀನಸ್ಥಿತಿಗೆ ಬಂದು ತಾತ್ಕಾಲಿಕಾವಶ್ಯವಾದ ಬೇರೆ ಬೇರೆ ವಿದ್ಯೆಯನ್ನು ಕಲಿಯುವುದರಲ್ಲಿಯೇ

ಜನರು ತಮ್ಮ ಲಕ್ಷ್ಯವನ್ನು ಕೊಡಹತ್ತಿದರು. ಬರಬರುತ್ತಾ ಲೌಕಿಕ ವಿದ್ಯೆಯೇ ವೃದ್ಧಿಯಾಗುತ್ತಾ ಬಂದು ಸಂಸ್ಕೃತವು ಸಂಪೂರ್ಣವಾಗಿ ಹಿಂದೆಬಿದ್ದು ಸಂಸ್ಕೃತಪುಸ್ತಕಗಳು ಗೆದ್ದಲು ಇಲಿ ಮುಂತಾದ ಪ್ರಾಣಿಗಳಿಗೆ ಆಹಾರಕ್ಕಾಗಿ ಉಪಯೋಗಿಸಲು ಮೂಲೆಪಾಲಾಗುತ್ತಾ ಬಂದಿತು. ಮಾತ್ರವಲ್ಲ ಉದ್ಗ್ರಂಥವನ್ನು ಉಲ್ಲೇಖಿಸಿರುವ ಪುಸ್ತಕ ಭಂಡಾರಗಳು ವ್ಯಾಸಪೀಠದ ಮೇಲೆ ಕುಳಿತುಕೊಂಡು ಪೂಜಿಸಿಕೊಳ್ಳುವುದರ ಬದಲಾಗಿ ಮಿಠಾಯಿಯ ಅಂಗಡಿಗಳಲ್ಲಿ ಕೆಲ ಕಾಲ ಅಜ್ಞಾತವಾಸದಲ್ಲಿದ್ದು ತಿಂಡಿಯ ಪೊಟ್ಟಣಗಳ ಮಾರ್ಗವಾಗಿ ಬಾಲಕರ ಕೈಯಿಂದ ಹೇಗಾದರೂ ತಪ್ಪಿಸಿಕೊಂಡು ಹಾದಿಬೀದಿಯ ಪಾಲಾಗುವ ದುಷ್ಕಾಲವು ಬಂದಿತು. ಹಾಯ್ ಹಾಯ್! ಎಂತಹ ಶೋಚನೀಯವಿದು? ಆರ್ಯ ಮಹಾಶಯರೇ! ಬ್ರಾಹ್ಮಣ ಭಾಷೆಯಾದ ಸಂಸ್ಕೃತಕ್ಕೇ ಇಂತಹ ಹೀನಸ್ಥಿತಿಯೊದಗಿದುದನ್ನು ನೋಡಿದರೆ ಯಾವ ಆರ್ಯನ ಮನಸ್ಸಾದರೂ ಕರಗದೇ ಇದ್ದೀತೇ? ಮಾಡತಕ್ಕದ್ದೇನು ಸೂರ್ಯಚಂದ್ರಾದಿಗಳಿಗೂ ಕಾಲವಿಶೇಷದಲ್ಲಿ ರಾಹು ಕೇತುಗಳ ಕಾಟದಿಂದ ಕಾಂತಿಗೇ ಮುಸುಗುಬೀಳುವುದಿಲ್ಲವೇ, ಹಾಗೆಯೇ ಕಾಲಾಧೀನವಾದ ಸಂಸ್ಕೃತಭಾಷೆಗೂ ಇದೊಂದು ಗ್ರಹಣಕಾಲವೆನ್ನಬೇಕು. ಅಸ್ತು, ಸಂಸ್ಕೃತಭಾಷೆಯೇ ಹಿಂದೆಬಿದ್ದಿರುವಾಗ ಸಂಸ್ಕೃತಭಾಷೆಯಲ್ಲಿರತಕ್ಕ ಶಾಸ್ತ್ರವನ್ನು ನೋಡುವವರಾದರೂ ಯಾರು? ಶಾಸ್ತ್ರಜ್ಞಾನವಾದರೂ ಹೇಗೆ? ಈ ಕಾರಣಗಳಿಂದ ಪುನಃ ಜ್ಞಾನಶೂನ್ಯರಾಗಿ ಜನಗಳು ಪಶುಪ್ರಾಯರಾಗುತ್ತಾ ಬಂದರು. ಆಗ ಶ್ರೀಹರಿಯು ಸಾತ್ವಿಕ ಜೀವರುಗಳಾಗಿಯೂ ದೇಶಕಾಲಗಳಿಗೆ ಸಿಕ್ಕಿದವರಾಗಿ ಜ್ಞಾನಹೀನರಾಗುತ್ತಿರುವ ಸುಜೀವಿಗಳನ್ನು ಉದ್ಧಾರಮಾಡಲು ಇಚ್ಛೈಸಿ, ಬ್ರಹ್ಮಮಾನಸ ಪುತ್ರರಾದ ದೇವಮುನಿಗಳಿಗೆ ಆಜ್ಞೆಯನ್ನಿತ್ತನು. ಭಗವದಾಜ್ಞಾಪ್ರಕಾರ ಶ್ರೀನಾರದರು ಸುಮಾರು ೩೦೦—೩೫೦ ವರ್ಷಗಳ ಹಿಂದೆ ಪುರಂದರಗಡವೆಂಬ ಗ್ರಾಮದಲ್ಲಿ ವಾಸವಾಗಿರುತ್ತಿದ್ದ ಸಾಧುವರ್ಯರಾದ ವರದಪ್ಪನೆಂಬ ಬ್ರಾಹ್ಮಣನಲ್ಲಿ ಅವತರಿಸಿ ಪುರಂದರದಾಸರೆಂದು ವಿಖ್ಯಾತರಾದರು.

॥ ಶ್ರೀಮಹಿದಾಸಾಯ ನಮಃ ॥

ಹನ್ನೊಂದನೆಯ ತರಂಗ.

ದಾಸತ್ವ.

ಮಹಾನುಭಾವರಾದ ಪುರಂದರದಾಸರೇ ಪಾಮರರೂ ಕೂಡ ಉದ್ಧಾರವಾಗುವಂತೆ ದಾಸಭಾವದಿಂದ ಭಗವತ್ಪೂಜೆಯನ್ನು ಮಾಡುವ ಪದ್ಧತಿಯನ್ನು ತಿಳುಹಿಸಿದವರು ಅಂದರೆ ಇವರ ಕಾಲದಲ್ಲಿಯೇ ದಾಸತ್ವವೆಂಬುದೊಂದು ಹೊಸದಾಗಿ ಪ್ರಾರಂಭವಾಯಿತೆಂದಾಗಲಿ, ಇವರಿಗಿಂತಲೂ ಮೊದಲು ಇರಲೇ ಇಲ್ಲವೆಂತಲಾಗಲಿ ತಾತ್ಪರ್ಯವಲ್ಲ, ಎಂದಿನಿಂದಲೂ ಇದ್ದೇ ಇದ್ದಿತು. ದಾಸಭಾವಭಕ್ತಿಮಾರ್ಗಕ್ಕೆ ಮೂಲಪುರುಷರಾದವರು ಶ್ರೀಪ್ರಾಣದೇವರೆನ್ನಬಹುದು. ಇವರು ಶ್ರೀರಾಮಚಂದ್ರನನ್ನು ಪ್ರೀತಿಪಡಿಸಿದುದು ದಾಸತ್ವದಿಂದಲೇ ಎಂಬುದು ರಾಮಾಯಣದಿಂದ ಸ್ಪಷ್ಟವಾಗುವುದು. ಅಂದಿನಿಂದಲೂ ಅನೂಚಾನವಾಗಿ ಇದ್ದೇ ಇದ್ದಿತು. ಮಾತ್ರವಲ್ಲ ಶ್ರೀಮದಾಚಾರ್ಯರ ಮತದ ಮೂಲತತ್ವನೇ 'ದಾಸೋಽಹಂ' ಎಂಬುವುದು. ಆದುದರಿಂದ ಶ್ರೀಪುರಂದರದಾಸರೂ ಆಚಾರ್ಯರ ಮತಸಂಪ್ರದಾಯ ಪ್ರವರ್ತಕರೇ ಅಲ್ಲದೆ ಇವರ ಕಾಲದಲ್ಲಿಯೇ ಹೊಸದಾದ ಒಂದು ಮತವನ್ನಾಗಲೀ ಪದ್ಧತಿಯನ್ನಾಗಲೀ ಏರ್ಪಡಿಸಿದವರಲ್ಲವೆಂಬುದು ನಿಶ್ಚಿತವಾದಂತಾಯಿತು. ಪರಂತು ದಾಸಭಾವಲಕ್ಷಣಗಳನ್ನು ಮಾತ್ರ ಈ ಕಲಿಗಾಲದ ಅಲ್ಪಾಯುಗಳಾದ ಚಂಚಲಚಿತ್ತರಾದ ಪ್ರತಿಭಾಶಕ್ತಿನ್ಯೂನರಾದ ಪಾಮರರಿಗೂ ತಿಳಿಯುವಷ್ಟು ಸುಲಭರೀತಿಯಿಂದ ತಿಳುಹಿಸಿದ ಮಹದುಪಕಾರಿಮಾತ್ರ ಪುರಂದರದಾಸರಾಯರೆನ್ನಬಹುದು. ಇವರು ಮಾಡಿದ ಉಪಕಾರವಾದರೂ ಏನೆಂದರೆ (ಕಲೌ ಸಂಕೀರ್ತ್ಯ ಕೇಶವ) ಎಂದರೆ ಕಲಿಯುಗದಲ್ಲಿ ಹರಿನಾಮಸಂಕೀರ್ತನೆಯೇ ಭಗವದನುಗ್ರಹಕ್ಕೆ ಸುಲಭವಾದ ಮಾರ್ಗವೆಂಬುವದನ್ನು ಪರಿಷ್ಕರಿಸಿ, ಗಾನರೂಪದಿಂದ ಶ್ರೀದೇವರನ್ನು ಮೆಚ್ಚಿಸುವ ಪದ್ಧತಿಯನ್ನು ತಿಳುಹಿಸಿದರು. ಹಾಗೂ ಈ ಸಂಪ್ರದಾಯವೂ ಕೂಡ ಇವರಿಗಿಂತಲು ಹಿಂದೆ ಇರಲೇ ಇಲ್ಲ

ವೆಂಬುವ ತಾತ್ಪರ್ಯವಲ್ಲ. ಅನೇಕರು ಈ ಸಂಪ್ರದಾಯಸ್ಥರು ಇರುತ್ತಿದ್ದರಾದರೂ ಇತ್ತೀಚೆಗೆ ಈ ಸಂಪ್ರದಾಯಕ್ಕೆ ಮೂಲಪುರುಷರು ಶ್ರೀಶ್ರೀಪಾದರಾಯರೆನ್ನಬಹುದು. ಇವರು ಸಾಕ್ಷಾತ್ ಧ್ರುವರಾಯರೆಂದು ಪ್ರಸಿದ್ಧಿಯುಂಟು. ಇವರೇ ಮೊದಲು ಪ್ರಾಕೃತಭಾಷೆಯಿಂದ ಪದ್ಯಗಳನ್ನು ರಚಿಸಿ, ಗಾನರೂಪದಿಂದ ಶ್ರೀದೇವರನ್ನು ಸ್ತೋತ್ರಮಾಡಲಾರಂಭಿಸಿದವರು ಅಲ್ಲದೆ ಇವರ ಶಿಷ್ಯರಾದ ಪ್ರಹ್ಲಾದಾಂಶಸಂಭೂತರಾದ ವ್ಯಾಸರಾಯರು ಮತ್ತು ಇವರ ಶಿಷ್ಯರಾದ ವಾದಿರಾಜತೀರ್ಥರು ಮುಂತಾಗಿ ಅನೇಕರಿರುತ್ತಿದ್ದರು. ದಾಸಾರ್ಯರ ಗುರುಗಳು ವ್ಯಾಸರಾಯರೆಂಬುವರು ಪುರಂದರದಾಸರಿಂದೀಚೆಗೂ ಈ ಮಹಾತ್ಮರ ಮೇಲುಪಂಕ್ತಿಯನ್ನೇ ಅನುಸರಿಸಿ, ಗಾನರೂಪದಿಂದ ತಾವು ರಚಿಸಿದ ಪದ್ಯಗಳನ್ನು ಪರಮಾತ್ಮನಲ್ಲಿ ಸಮರ್ಪಿಸಿ, ತಮ್ಮಿಂದ ಮುಂದಿನವರು ಸ್ತೋತ್ರಮಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಶಿಷ್ಯಪ್ರಶಿಷ್ಯರುಗಳು ಅನೇಕರಿರುವರು. ಇವರುಗಳಲ್ಲಿ ದಾಸಾರ್ಯರ ಮುಖ್ಯಶಿಷ್ಯರಾದ ವಿಜಯದಾಸರೆಂಬುವವರು ದಾಸಾರ್ಯರ ಅಭಿಮತದಂತೆ ಲೋಕೋದ್ಧಾರಕ್ಕಾಗಿ ದಾಸರು ಕೆವಕೊಂಡು ರಚಿಸಿದ ಪದ್ಯಗಳು ೫ ಲಕ್ಷವಾಗುವಂತೆ ಪೂರ್ಣಮಾಡಿದವರು ಅಂದರೆ ನಾಲ್ಕೂಮುಕ್ಕಾಲು ಲಕ್ಷಪದ ಸುಳಾದಿಗಳನ್ನು ಶ್ರೀಪುರಂದರದಾಸರು ತಾವು ರಚಿಸಿ, ಉಳಿದ ಕಾಲು ಲಕ್ಷವನ್ನು ಸ್ವಪ್ನದಲ್ಲಿ ಇವರಿಗೆ ಅಂಕಿತವನ್ನು ಉಪದೇಶಿಸಿ, ಇವರಿಂದ ಪೂರ್ಣಮಾಡಿಸಿದರು. ಅಲ್ಲದೆ ಈ ವಿಜಯದಾಸರಾದರೊ ತೀರ್ಥಯಾತ್ರೆಯ ನೆಪದಿಂದ ದೇಶಾಟನೆಯನ್ನು ಮಾಡಿ ದೇಶ ದೇಶದಲ್ಲಿರುವ ಪಾಮರರುಗಳಿಗೆಲ್ಲಾ ತತ್ತ್ವೋಪದೇಶವನ್ನು ಮಾಡಿ ಭಾಷೋದ್ಧಾರ ಧರ್ಮೋದ್ಧಾರ ದೇಶೋದ್ಧಾರ ಇವೇ ಮುಂತಾದ ಮಹತ್ಕಾರ್ಯಗಳನ್ನು ಮಾಡಿರುವರು. ಇವರ ಶಿಷ್ಯರಾದ ಭಾಗಣ್ಣದಾಸರು, ಪಂಗನಾಮ ತಿಮ್ಮಣ್ಣದಾಸರು, ಮೋಹನ್ನದಾಸರೇ ಮುಂತಾಗಿ ಅನೇಕರು ಅವರಂತೆಯೇ ಸನ್ಮಾರ್ಗಬೋಧಕರಾದರು. ಇವರ ಶಿಷ್ಯವರ್ಗದಲ್ಲಿ ಸೇರಿದ ಮತ್ತೋರ್ವ ಮಹನೀಯರಾದ ಜಗನ್ನಾಥದಾಸರಾಯರೆಂಬುವವರು ಪ್ರಾಕೃತಭಾಷೆಯಲ್ಲಿ ರಚಿಸಿರುವ ಸಕಲ ಶಾಸ್ತ್ರಾರ್ಥಗರ್ಭಿತ

ವಾದ (ಹರಿಕಥಾಮೃತಸಾರ) ಎಂಬುವ ಗ್ರಂಥವನ್ನವಲೋಕಿಸಲು ನಿರ್ಮತ್ಸರಿಗಳಾದ ಭಗವದ್ಭಕ್ತರುಗಳಿಗೆ ಇವರಿಂದ ಕರ್ಣಾಟಕ ಭಾಷೋದ್ಧಾರ ಕಾರ್ಯವಾದರೂ ಎಷ್ಟರಮಟ್ಟಿಗೆ ನಡೆದಿರುವುದೆಂಬುದೂ ಪ್ರಪಂಚಕ್ಕಾದ ಉಪಕಾರವೆಷ್ಟೆಂಬುದೂ ವ್ಯಕ್ತವಾಗುವುದು.

॥ ಶ್ರೀಜಯಾರಮಣಾಯ ನಮಃ ॥

ಹನ್ನೆರಡನೆಯ ತರಂಗ.

ದಾಸಾರ್ಯರ ಕಾರ್ಯಕ್ರಮ.

ಶ್ರೀಮದಾಚಾರ್ಯರ ಶಾಸ್ತ್ರವನ್ನವಲೋಕಿಸಿ ತತ್ವಾರ್ಥವಿಚಾರವಮಾಡಿ ತತ್ವಜ್ಞಾನ ಸಂಪಾದಿಸುವವರು ಹೇಗೂ ಇರಲಿಲ್ಲ. ಯಥಾಮತಿಯಾದರೂ ತಿಳಿಯಬಹುದಾಗಿದ್ದಿತೆಂದರೆ, ಸಂಸ್ಕೃತಭಾಷೆಯನ್ನು ಅಭ್ಯಾಸವಮಾಡುವ ಪದ್ಧತಿಯು ಸಂಪೂರ್ಣವಾಗಿ ಕಡಿಮೆಯಾಗುತ್ತ ಬಂದಿತೆಂಬುವ ವಿಷಯವನ್ನು ಹಿಂದೆಯೇ ಸೂಚಿಸಿರುವುದು ವಾಚಕರ ನೆನಪಿನಲ್ಲಿರಬಹುದು. ಮಾತ್ರವಲ್ಲ; ಲೋಕಾನುಭವದಿಂದಲೂ ತಿಳಿದುಕೊಳ್ಳಬಹುದು. ಈ ಕಾಲದಲ್ಲಿ ದಾಸಾರ್ಯರು ಆಚಾರ್ಯರ ಶಾಸ್ತ್ರಾಭಿಪ್ರಾಯವು ಪಾಮರರಿಗೂ ಉಂಟಾಗುವಷ್ಟು ಸುಲಭ ಶೈಲಿಯಿಂದ ಪ್ರಾಕೃತಭಾಷೆಯಲ್ಲಿ ಪದ ಪದ್ಯಗಳ ರೂಪದಿಂದ ವಿಸ್ತರಿಸಿದರು. ವಸ್ತುತಃ ಯಾವ ಗ್ರಂಥವೇ ಆಗಲಿ ಒಂದು ಭಾಷೆಯಿಂದ ಮತ್ತೊಂದು ಭಾಷೆಯಲ್ಲಿ ಪರಿವರ್ತಿತವಾಗಿ ಬರುವಾಗ ವಿಷಯವು ಅದೇ ಆದರೂ ಮೂಲಭಾಷೆಯಲ್ಲಿರುವಷ್ಟು ಸತ್ವವು ಪರಿವರ್ತಿತ ಭಾಷೆಯಲ್ಲಿ ಇರಲಾರದೆಂಬುದು ನಿಶ್ಚಯ. ತತ್ರಾಪಿ ದಾಸಾರ್ಯರು ಪರಿವರ್ತನ ಮಾಡಿದ ಭಾಷೆಯಾದರೊ ದೇವಭಾಷೆ ಗ್ರಂಥವೋ ಉದ್ಗ್ರಂಥ ಇವೆಲ್ಲದಕ್ಕೂ ಮೇಲಾಗಿ ಬ್ರಹ್ಮಪದಾರ್ಹರಾದ ಜೀವೋತ್ತಮರಾದ ಶ್ರೀಆಚಾರ್ಯರ ಮುಖದಿಂದ ಬಂದಿರತಕ್ಕ ವಾಕ್ಯಗಳಿವು, ಅಂದಮೇಲೆ ಪರಿವರ್ತನ ಮಾಡುವಾಗ ಹೇಗೂ ಮೂಲಗ್ರಂಥದಲ್ಲಿರುವಷ್ಟು ಸತ್ವವಿರಲಾರದೆಂಬುದು ಶತಶಃ ಒಪ್ಪಿಕೊಳ್ಳಬಹುದಾದ ವಿಷಯವಾದರೂ, ಉತ್ತಮಾಧಿಕಾರಿಗಳಿಂದಲವಲೋಕಿಸಲರ್ಹವಾದ ಶ್ರೀಆಚಾರ್ಯರ ಶಾಸ್ತ್ರ

ವನ್ನು ಭಾಷಾಂತರ ಮಾಡಿರುವಾಗಲೂ ಇರಬಹುದಾದ ಸತ್ವವು, ಮಾನವ ಜೀವರುಗಳ ಪ್ರತಿಭಾಶಕ್ತಿಗೆ ಸಾಕೆಂಬುದರಲ್ಲಿ ಸಂಶಯವಿಲ್ಲ. ಮಾತ್ರ ವಲ್ಲ; ಆಚಾರ್ಯರ ಶಾಸ್ತ್ರವು ಗಹನವಾದುದರಿಂದ ಸುಲಭ ರೀತಿಗೆ ತರುವು ದಕ್ಕಾಗಿಯೇ ಭಾಷಾಂತರ ಮಾಡಿರುವರು. ಇನ್ನೆಲ್ಲದಕ್ಕೂ ಮೇಲಾಗಿ ಭಾ ಷಾಂತರಮಾಡಿರುವವರಾದರೋ ದೇವಋಷಿಗಳಾದ ನಾರದರಾದುದರಿಂದ ಇವರಿಂದ ಜೋಡಿಸಲ್ಪಟ್ಟ ವಾಕ್ಯಶಕ್ತಿಯಿಂದಲೂ, ಅಕ್ಷರಸಂಯೋಜನ ಶಕ್ತಿಯಿಂದಲೂ ಕ್ರಮವಾದ ಆನುಪೂರ್ವಿಯ ಶಕ್ತಿಯಿಂದಲೂ, ಮೂಲ ಗ್ರಂಥದ ಬಹುಭಾಗದ ಶಕ್ತಿಯು ಇವರ ಕವಿತೆಯಲ್ಲಿ ಇರಬಹುದೆಂದು ಉತ್ಕಂಠದಿಂದ ಹೇಳಬಹುದು. ಅಲ್ಲದೆ ನರಕವಿಗಳಂತೆ ಅಕ್ಷರಗಳನ್ನು ಬಲಾ ತ್ಕಾರದಿಂದ ಹಿಡಿದೆಳೆದೆಳೆದು ಜೋಡಿಸಿದುದಲ್ಲ, ಕ್ಷರಾಕ್ಷರೋತ್ತಮ ಪುರು ಷನಾದ ಶ್ರೀಹರಿಯ ಸಂಕಲ್ಪದಂತೆ ಇವರ ಮುಖದಿಂದ ಶ್ರೀಆಚಾರ್ಯರು ನುಡಿಸಿದವಾಕ್ಯಗಳಿವು. ಅಂದಮೇಲೆ ಇವರ ಕವಿತ್ವದ ಸತ್ವವೆಷ್ಟೆಂಬುದನ್ನು ವಾಚಕರೇ ಊಹಿಸಬಹುದು. ಅಲ್ಲದೆ ಕನಕದಾಸರು ("ಲಲಿತವಹ ಕನ್ನ ಡದ ನುಡಿಯಲಿ ತಿಳಿದುಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು") ಎಂದ ಪ್ಪಣೆ ಕೊಡಿಸಿರುವರು. ಅಂದಮಾತ್ರಕ್ಕೇ ದೇವಾಂಶಸಂಭೂತರಾದಿ ವರು ದೇವಭಾಷೆಯನ್ನು ದೂರುವುದಕ್ಕಾಗಿ ಹೊರಟವರಲ್ಲ, ಪ್ರಾಕೃತ ಭಾಷೆಯಲ್ಲಿರುವ ಲಾಲಿತ್ಯವನ್ನೂ, ಸುಲಭವಿಂದ ಗ್ರಹಿಸಬಹುದೆಂಬು ದನ್ನೂ, ತಿಳಿಯಪಡಿಸುವುದಕ್ಕಾಗಿ ಮಾತ್ರ ಹೀಗೆ ಹೇಳಿರುವರು. ಆದು ದುರಿಂದ ಕನ್ನಡವೆಂದಮಾತ್ರಕ್ಕೆ ಔದಾಸೀನ್ಯತಕ್ಕದಲ್ಲ. ಶ್ರೀಪುರಂದರ ದಾಸರೇ ಆಗಲಿ ಅಥವಾ ಇವರ ಸಂಪ್ರದಾಯಾನುಯಾಯಿಗಳೇ ಆಗಲಿ ಅಪರೋಕ್ಷ ಜ್ಞಾನಿಗಳಾದಿವರುಗಳಿಂದ ರಚಿಸಲ್ಪಟ್ಟ ಕವಿತ್ವದಲ್ಲಿರತಕ್ಕ ಸನ್ನಿ ಧಾನ ವಿಶೇಷವೇನೆಂದರೆ, ಶಾಸ್ತ್ರಾವಲೋಕನದಿಂದಲಾದರೂ ಒಮ್ಮೆಗೆ ಗ್ರಹಣಶಕ್ತಿಯಿಲ್ಲದ ಕೆಲವರು ಶಠರಾಗಬಹುದು, ಇವರ ಕವಿತ್ವವಾದರೋ, ಎಂತಹ ಕಠಿಣಚಿತ್ತನಾಗಿರಲಿ, ಭಗವತ್ಸಂಬಂಧವಾದ ಗಂಧಗಾಳಿಯೇ ಇಲ್ಲದ ಮನಸ್ಸುಳ್ಳವನಾಗಿರಲಿ, ಅಂತಹನ ಮನಸ್ಸನ್ನು ಕೂಡಾ ಆಕರ್ಷಿಸ ದಿರದು, ಸಂಪೂರ್ಣವಾಗಿ ಮನಸ್ಸನ್ನು ಪರಿಪಕ್ವಸ್ಥಿತಿಗೇ ತರುತ್ತೆಂಬುದ

ರಲ್ಲಿ ಸಂಶಯವಿಲ್ಲ. ಹಾಗೂ ಒಂದೇ ಸಾರಿಗೆ ಪರಿಪಕ್ವಸ್ಥಿತಿಗೆ ತರುವದಾದರೂ ನಂಬದಿರುವ ಮಾತೆನ್ನಲು ಇವರುಗಳಿಂದ ವಿರಚಿತವಾದ ಪದ್ಯಗಳನ್ನು ಕೇಳುತ್ತಿರುವ ವರಿಗಾದರೂ ಮನಸ್ಸು ಒಂದೇ ಸ್ಥಿತಿಯಲ್ಲಿರುವ್ರದೆಂಬುವುದರಿತೂ ಎಂದೆಂದಿಗೂ ಸುಳ್ಳಲ್ಲ. ಹೀಗೆಯೇ ಅನೇಕ ಕಾಲ ಪ್ರಯತ್ನಮಾಡಿದಲ್ಲಿ, ಪರಲೋಕಸಾಧನಕ್ಕೆ ಅವಾಂತರ ಪ್ರತಿಬಂಧಕಗಳೆಷ್ಟೇ ಇರಲಿ, ಮುಖ್ಯ ಪ್ರತಿಬಂಧಕವಾದ ಮನಶ್ಚಾಂಚಲ್ಯವನ್ನೇ ಹೋಗಲಾಡಿಸಿ ಮನಃಪ್ರವಣತೆಯನ್ನೇ ಉಂಟುಮಾಡುವ ಅಸದೃಶಶಕ್ತಿಯೇ ಶ್ರೀದಾಸಾರ್ಯರುಗಳ ಕವಿತ್ವದ ಆನುಪೂರ್ವಿಯಲ್ಲಿರುವ್ರದೆಂದರೇನು ಅತಿಶಯೋಕ್ತಿಯಾಗಲಾರದು. ಇದನ್ನು ಮನನಮಾಡಲು ಅನುಭವಸಿದ್ಧವಾಗುವ್ರದು. (ಸರ್ವೇಷಾಮೇವ ಧರ್ಮಾಣಾಂ ಮನಶ್ಶುದ್ಧಿರ್ಹಿಕಾರಣಂ) ಎಂದಿರುವ್ರದರಿಂದ ಮನಶ್ಚಾಂಚಲ್ಯದಿಂದ ಮಾಡುವ ಯಾವ ಸತ್ಕರ್ಮಗಳೇ ಆಗಲಿ, (ಅಜಾಗಲಸ್ತನಮಿವ ವೃಥಾತಾನಿ ವಿದೋವಿದುಃ) ಎಂದರೆ ಆಡಿನ ಕುತ್ತಿಗೆಯಲ್ಲಿರುವ ಸ್ತನದೋಪಾದಿಯಲ್ಲಿ ಸ್ತನದ ಆಕೃತಿಮಾತ್ರವಲ್ಲದೆ ಸ್ತನದಿಂದುಂಟಾಗಬೇಕಾದ ಫಲರೂಪವಾದ ಕ್ಷೀರದ ಸಂಬಂಧವೇ ಇಲ್ಲದಿರುತ್ತದೆ ಹೇಗೆ ಹಾಗೆಯೇ, ಕರ್ಮದ ಆಕೃತಿ ಮಾತ್ರವಲ್ಲದೆ ಕರ್ಮಜನ್ಯವಾದ ಫಲವೇನೋ ಖಂಡಿತವಾಗಿಯೂ ಲಭಿಸದೆಂದಿರುವ್ರದರಿಂದ ಸಕಲಸಾಧನಕ್ಕೂ ಮನಶ್ಶುದ್ಧಿಯೇ ಕಾರಣವಾಯಿತು. ಜ್ಞಾನ, ಭಕ್ತಿ ವೈರಾಗ್ಯಾದಿಗಳ ಫಲರೂಪವಾದ ಮನಶ್ಶುದ್ಧಿಯೇ ದಾಸರ ಪದ್ಯಗಳನ್ನು ಮನನಮಾಡುವ್ರದರಿಂದುಂಟಾಗುತ್ತದೆಂದ ಮೇಲೆ ಈ ಮಹನೀಯರುಗಳಾದರೋ ಸಜ್ಜನರುಗಳಿಗೆ ಪರಲೋಕಬಂಧುಗಳಲ್ಲವೆ, ಆದರೆ ಕೆಲವರು ಒಂದು ವಿಧವಾದ ಆಕ್ಷೇಪಣೆ ಮಾಡಬಹುದು. ಏನೆಂದರೆ ಅದೃಷ್ಟಫಲವಾದ ಪರಲೋಕದ ವಿಚಾರವಾಗಿ ಮಾತ್ರ ವಿಮರ್ಶಕರಾಗಿರುವವರಲ್ಲದೆ ದೃಷ್ಟಫಲವಾದ ರಾಷ್ಟ್ರಸೇವೆಗೆ ಬೇಕಾದ ವಾಕ್ಯಗಳನ್ನೇನೂ ಮಾಡಿರುವ್ರದಿಲ್ಲನೆಂಬುದಾಗಿಯೂ, ಮತ್ತೂ ಇವರುಗಳಿಂದ ಅಂತಹ ಕಾರ್ಯಪ್ರಯತ್ನಗಳೇನೂ ನಡೆದಿರುವ್ರದಿಲ್ಲವೆಂಬುವ್ರದಾಗಿಯೂ ಅನುಮಾನಿಸಬಹುದಲ್ಲವೆ, ಈ ಮಹಾತ್ಮರುಗಳಿಂದ ದೇಶಸೇವೆಯಾದರೋ ಎಷ್ಟರ ಮಟ್ಟಿಗೆ ನಡೆದಿರು

ವುದೆಂಬುದು ವಿಚಾರಮಾಡಿ ನೋಡುವ, ರಾಷ್ಟ್ರದ ಏಳಿಗೆಗೆ ಅತ್ಯವಶ್ಯವಾದುದು ವರ್ಣಾಶ್ರಮಧರ್ಮ, ನೀತಿ, ಭೂತದಯೆ, ನಡವಳಿಕೆ ಇವೇ ಮುಂತಾದವುಗಳಲ್ಲವೆ, ಇವುಗಳ ತಿದ್ದುಪಾಡಿಗಾಗಿ ಎಷ್ಟು ಪ್ರಯತ್ನಮಾಡಿರುತ್ತಾರೆಂಬುದನ್ನು ದಾಸಾರ್ಯರುಗಳು ರಚಿಸಿರುವ ಪದ್ಯಗಳಿಂದ ತಿಳಿದುಕೊಳ್ಳಬಹುದು. ದಾಸಾರ್ಯರುಗಳಲ್ಲಿ ಒಬ್ಬರಾದ ಮಹನೀಯರು ಈ ರೀತಿಯಲ್ಲಿ ಅಪ್ಪಣೆ ಕೊಡಿಸಿರುತ್ತಾರೆ.

ರಾಗ ಮುಖಾರಿ, ಝಂಪೆತಾಳ.

(ಧರ್ಮವೇ ಜಯವೆಂಬ ದಿವ್ಯಮಂತ್ರ । ಮರ್ಮವನು ತಿಳಿದವಗೆ ಬಳಿಕಹುದು ಕೇಳೀ ॥ ಪಲ್ಲ ॥ ವಿಷವನುಣಿಸಿದಗೆ ಷಡು । ರಸವನುಣಿಸಲು ಬೇಕು । ದ್ವೇಷವನು ಗೈದವನ ಪೋಷಿಸಲು ಬೇಕೂ ॥ ಮೋಸದಲಿ ಜೀವಕ್ಕೆ ಮುನಿದು ಕೆಡಿಸುವವನ । ಆಸೆಯಲಿ ಅವರವನ। ಹೆಸರಿಡಲು ಬೇಕು ॥ ೧ ॥)

ಈ ಒಂದೇ ಒಂದು ಪದ್ಯದಿಂದ, ಧರ್ಮವೇ ಶ್ರೇಯಸ್ಕರವೆಂಬುದು ಭೂತದಯೆಯಾದರೂ ಎಷ್ಟರ ಮಟ್ಟಿಗಿರಬೇಕೆಂಬುದು ಅನ್ಯೋನ್ಯಭಾವ, ಸರ್ವಕ್ಕೂ ಕಾರಣವಾದ ಶಾಂತತೆ ಎಂದರೆ ಅಸಹಕಾರ, ತನ್ನ ದ್ರೋಹಿಯಲ್ಲಿಯೂ ತಾನು ದಯೆ, ಅಥವಾ ಪ್ರೀತಿಯನ್ನೇ ತೋರಿಸಬೇಕೆಂಬುವಷ್ಟು, ಅಸಹಕಾರದ ತತ್ವವನ್ನು ಮುಂದರಿಸಿರುತ್ತಾರೆ. ಇವರು ಬಾಯಿಯಲ್ಲಿ ಮಾತ್ರ ಈ ರೀತಿ ಹೇಳುತ್ತಿದ್ದುದು ಮಾತ್ರವಲ್ಲ. ಹೇಳಿದಂತೆಯೇ ತಾವು ಆಚರಿಸಿರುತ್ತಿದ್ದರೆಂಬುವ ವಿಷಯವು ಈ ಮಹನೀಯರೊಬ್ಬೊಬ್ಬರ ಜೀವನಚರಿತ್ರೆಗಳಿಂದ ತಿಳಿದುಬರುವುದು. ಇವರುಗಳ ಜೀವನಚರಿತ್ರೆಯನ್ನು ಇಲ್ಲಿ ವಿವರಿಸಲು ವಿಷಯಬಾಹುಳ್ಯಭಯದಿಂದ, ಇವರ ಮುಖದಿಂದ ಬಂದಿರತಕ್ಕ ಒಂದೆರಡು ವಾಕ್ಯಗಳನ್ನು ಮಾತ್ರ ಉದಾಹರಿಸುತ್ತೇನೆ. ಅಂದಮೇಲೆ ಅಸಹಕಾರದಲ್ಲಿಯಾದರೂ ಇವರುಗಳು ಎಷ್ಟು ಮುಂದ್ವರಿದಿದ್ದರೆಂಬುದು ಗೊತ್ತಾಗುವುದು. ಹೀಗೆಯೇ ಇವರು ರಚಿಸಿರುವ ಒಂದೊಂದು ಪದ್ಯಗಳೂ ತಾತ್ವಿಕಾರ್ಥ ಐತಿಹಾಸಿಕ, ಸಾಮಾಜಿಕ, ಮೊದಲಾಗಿ ಸರ್ವವಿಧದ ಸುಧಾರಣೆಗಳಿಗೂ, ಬೇಕಾದ ಅರ್ಥಗರ್ಭೀಕೃತವಾಗಿಯೇ ಇರುವುವು. ಇನ್ನು, ರಾಷ್ಟ್ರದ ಔನ್ನತ್ಯಸ್ಥಿತಿಗೆ

ಅತ್ಯವಶ್ಯವಾದುದು ಭಾಷೋದ್ಧಾರ, ಇವರಿಂದ ಕರ್ನಾಟಕಭಾಷೆಯು ಹೇಗೂ ಉದ್ಧಾರವಾಗಿದೆ ಮಾತ್ರವಲ್ಲ; ಸಂಗೀತ ಕಲೆಯನ್ನು ಭೂಮಿಯಲ್ಲಿ ತಂದು ಬಿತ್ತಿದವರೂ ಇವರೇ, ಸಂಗೀತಶಾಸ್ತ್ರವನ್ನು ತಿದ್ದುಪಾಡಿಗೆ ತಂದು, ಗಾನವಿದ್ಯೆಯ ಉದ್ಧಾರಕರ್ತರಾದ ಮೂಲ ಪುರುಷರೂ ಇವರೇ ಎಂಬುದಕ್ಕೆ ನಿದರ್ಶನವಾಗಿ, ಸಂಗೀತಶಾಸ್ತ್ರಾಭ್ಯಾಸಕ್ಕೆ ಅಸ್ತಿವಾರ ಸ್ವರೂಪವಾದ ಗೀತಗಳನ್ನು ರಚಿಸಿರುವವರು ಇವರೇ ಎಂಬುವುದಕ್ಕೆ ವಾಚಕರ ನೆನವಿಗಾಗಿ ಒಂದನ್ನು ಇಲ್ಲಿ ಮುಂದಿರಿಸುತ್ತೇನೆ.

ಪದುಮನಾಭ । ಪರಮ ಪುರುಷಾ । ಪರಂಜ್ಯೋತಿ । ಸ್ವರೂಪಾ ॥ ಗುರು ಪುರಂದರ । ವಿಠಲರಾಯನ । ಚರಣಕಮಲವ । ನಂಬಿಭಜಿಸಿರೊ । ಹರಿಯ ಕರುಣದೊಳಾದ ಭಾಗ್ಯವ । ಹರಿ ಸಮರ್ಪಣೆ ಮಾಡಿ ಬದುಕಿರೊ ॥

ಎಂಬುವ ಸಂಗೀತವಿದ್ಯಾಭ್ಯಾಸದ ಮೂಲವಾದ ಪಿಳ್ಳಾರಿಗೀತವು ಅಂದಬಳಿಕ ಸಂಗೀತವಿದ್ಯೆಯ ಉದ್ಧಾರಕಾರ್ಯವಾದರೂ ಇವರಿಂದಲೇ ಆಯಿತೆನ್ನಬಹುದು. ಅಂದಮೇಲೆ ರಾಷ್ಟ್ರದ ಏಳಿಗೆಗೆ ಅತ್ಯವಶ್ಯವಾದ ಕಾರ್ಯವಾದರೂ ಇವರಿಂದ ನಡೆದೇ ಇರುವುದೆಂಬುದು ವಾಚಕರ ಮನಸ್ಸಿಗೆ ನಿಶ್ಚಿತವಾಗಬಹುದು. ದಾಸಾರ್ಯರುಗಳು ರಚಿಸಿರುವ ಪದ್ಯಗಳು ಐಹಿಕಾಮುಷ್ಮಿಕ ಸಾಧನಕ್ಕೆ ಬೇಕಾಗಿರುವ ಸರ್ವವಿಧವಾದ ನೀತಿಗಳನ್ನೊಳಗೊಂಡಿರುವುದಾದರೂ, ಮುಖ್ಯತಃ ಒಂದೊಂದರ್ಥವು ಎದ್ದು ತೋರುತ್ತಿರುವುದು. ಕೆಲವು ವೇದಾಂತಪರವಾದ ಅರ್ಥವುಳ್ಳವುಗಳಾಗಿಯೂ, ಕೆಲವು ವೈರಾಗ್ಯಪರವಾಗಿಯೂ, ಕೆಲವು ಲೋಕದ ನಡವಳಿಕೆಯ ತಿದ್ದುವಿಕೆಗಾಗಿಯೂ, ಹಾಗೆಯೆ, ಶ್ರೀಹರಿಯ ಸ್ತೋತ್ರಪಾಠಗಳಾಗಿಯೂ, ಶ್ರೀಹರಿಯ ಪೂಜಾನಿಯಮಗಳನ್ನು ತಿಳಿಸತಕ್ಕವುಗಳಾಗಿಯೂ, ಶ್ರೀಹರಿಯ ಮಹಿಮಾ ವಿಶೇಷಗಳ ವರ್ಣನೆಯ ಪರವಾಗಿಯೂ, ಶ್ರೀಹರಿಯ ದಶಾವತಾರದ ಲೀಲಾವಿನೋದ ವರ್ಣನೆಯ ಪರವಾಗಿಯೂ, ಮುಖ್ಯತಃ ಸರ್ವವಿಧದಿಂದಲೂ ಶಾಶ್ವತವಾದ ಪಾರತ್ರಿಕ ಸಾಧನಕ್ಕೆ ಮೂಲಭೂತವಾದ ಆಸ್ತಿಕಮತಕ್ಕೆ ಮೂಲಮಂತ್ರವಾದ ಹರಿಗುರು ಭಕ್ತಿರಸಪ್ರಧಾನವಾದ ಪದ್ಯಗಳಾಗಿರುವುವು. ಜನಗಳ ಮನಸ್ಸಿನ ಮೇಲೆ ಪ್ರತಿಬಿಂಬಿಸುವಂತಹ

ಸುಲಭರೀತಿಯಿಂದ ಪದ್ಯಗಳನ್ನು ರಚಿಸಿ ಮಹದುಪಕಾರವನ್ನು ಮಾಡಿ ತಮ್ಮ ಕೀರ್ತಿಶರೀರವನ್ನು ಭರತಭೂಮಿಯಲ್ಲಿ ನಿಲ್ಲಿಸಿರುವರು. ಇದೀಗ ದಾಸಾರ್ಯರುಗಳ ಕಾರ್ಯಕ್ರಮವು.

॥ ಶ್ರೀವೇದವ್ಯಾಸಾಯ ನಮಃ ॥

ಹದಿಮೂರನೆಯ ತರಂಗ.

ದಾಸಕೂಟ, ವ್ಯಾಸಕೂಟ.

ವ್ಯಾಸಕೂಟವೋ, ದಾಸಕೂಟವೋ, ಇದೊಂದು ದೊಡ್ಡ ಗಂಡಾಂತರ. ಅನೇಕರು ದಾಸಕೂಟ, ವ್ಯಾಸಕೂಟವೆಂಬದೆ ಜಳವಿಂಗಳು, .ಕರಿದಿಂಗಳಿಗಿರುವಷ್ಟು, ಏಕೆ ಆಸ್ತಿಕ ನಾಸ್ತಿಕಮತಗಳಿಗಿರುವಷ್ಟು ಒಂದೊಂದಕ್ಕೆ ಭೇದವಿರುವುದೆಂಬ ದುರಭಿಪ್ರಾಯವುಳ್ಳವರಾಗಿರುತ್ತಾರೆ. ಎಂತಹ ವಿರೋಧಭಾವನೆ ಇದು. ವಿಚಾರಮಾಡಿ ನೋಡುವ, ವ್ಯಾಸಕೂಟವೆಂದರೆ, ವ್ಯಾಸಪ್ರಣೀತ ಗ್ರಂಥಾವಲೋಕನಮಾಡಿ ಸತ್ಸಂಪ್ರದಾಯ ಪ್ರವರ್ತಕರಾಗಿರುವವರುಗಳ ಗುಂಪು. ದಾಸಕೂಟವೆಂದರೆ ದಾಸಾರ್ಯರು ರಚಿಸಿರುವ ಪದ್ಯಗಳಾಧಾರದಿಂದ ದಾಸಾರ್ಯರುಗಳ ಮಾರ್ಗಾವಲಂಬಿಗಳಾದ ಸತ್ಸಂಪ್ರದಾಯಕರುಗಳ ಗುಂಪು. ಹೀಗಿರುವಾಗ ವೃಥಾ ಪಾಪಸಂಗ್ರಹಕ್ಕಾಗಿ ಕೆಲವರು ಸಾರವಿಲ್ಲದ ಕನ್ನಡ ಪದಗಳು ಎಂದು ಕೆಲವರು, ಸಂಸ್ಕೃತದ ಹೆಚ್ಚುಗಾರಿಕೆ ಏನು ಎಂದು ಕೆಲವರೂ ದೂಷಿಸುವರು. ಕನ್ನಡ ಪದವೆಂದಮಾತ್ರಕ್ಕೆ ಯಾರ ಮುಖದಿಂದ ಬಂದಿರತಕ್ಕವುಗಳು, ಮತ್ತು ಆ ಪದದ ಅರ್ಥಸ್ವಾರಸ್ಯವೆಂತಹದು, ಅಕ್ಷರಸಂಯೋಜನಕ್ರಮವೆಂತಹದು ಎಂಬೀ ಯಾವ ವಿಚಾರಕ್ಕೂ ಲಕ್ಷ್ಯಕೊಡದೆ ಮತ್ಸರದಿಂದ ದೂಷಿಸುವುದು ಸಂಸ್ಕೃತದ ಹೆಚ್ಚುಗಾರಿಕೆ ಏನೆಂಬ ಮಾತು ಎಂದಿಗಾದರೂ ಒಪ್ಪತಕ್ಕದ್ದೆ. ಛೀ! ಸರ್ವಕ್ಕೂ ಮಾತೃಭಾಷೆ ಮಾತ್ರವಲ್ಲ; ಭಾಷ್ಯಕಾರರಾದರೊ ಜೀವೋತ್ತಮರಾದ ವಾಯುದೇವರು ಮಾತ್ರವಲ್ಲ, ದಾಸರ ಕವಿತ್ವಗಳಿಗೂ ಆಧಾರವಾದುದು ಆಚಾರ್ಯರ ಗ್ರಂಥವೆ, ಹೀಗೆ ನಾನಾವಿಧದಿಂದಲೂ ಉಚ್ಚಸ್ಥಾನದಲ್ಲಿರುವ ದೇವಭಾಷೆಯ ಗ್ರಂಥದೂಷಕ

ರಾಗುವರು. ಎಂತಹ ಅನ್ಯಾಯ, ಅಪರೋಕ್ಷಿಗಳಾದ ದಾಸಾರ್ಯರುಗಳಾದರೋ ವ್ಯಾಸಪ್ರಣೀತಗ್ರಂಥವನ್ನೇ ಮೂಲಾಧಾರವಾಗಿಟ್ಟುಕೊಂಡು ಶ್ರೀ ಸರ್ವಜ್ಞರಾಯರ ಶಾಸ್ತ್ರಕ್ಕೆ ಅವಿರೋಧವಾದ ಮಾರ್ಗವನ್ನೇ ಅನುವರ್ತಿಸಿ ಪದ್ಯಗಳನ್ನು ರಚಿಸಿರುವರಲ್ಲದೆ ಬೇರೆಯ ಹೊಸಮತವನ್ನು ಏರ್ಪಡಿಸಲಿಲ್ಲ. ಆಚಾರ್ಯರ ಶಾಸ್ತ್ರವು ಗಹನವಾದುದಾದುದರಿಂದಲೇ ತಿಳಿಗನ್ನಡದಲ್ಲಿ ಸುಲಭರೀತಿಗೆ ತಂದಿರುವರೆಂಬುವ ವಿಷಯವನ್ನು ಹಿಂದೆ ಸೂಚಿಸಿರುವುದು ವಾಚಕರ ನೆನಪಿನಲ್ಲಿರಬಹುದು. ಅಂದಮೇಲೆ ವೈಷ್ಣವಜ್ಞಾನಪ್ರತಿಪಾದಕವಾದ ದಾಸರಪದ್ಯಗಳೂ ನಿರ್ದೋಷವಾದವುಗಳೆಂದೂ, ಗ್ರಾಹ್ಯವಾದವುಗಳೆಂದೂ, ತಿಳಿಯತಕ್ಕದ್ದು. ಪರಂತು ಬರಬರುತ್ತ ಕಾಲಸ್ಥಿತಿಯಲ್ಲಿ ದಾಸಕೂಟದವರಲ್ಲಿಯೇ ಆಗಲಿ, ವ್ಯಾಸಕೂಟದವರಲ್ಲಿಯೇ ಆಗಲಿ (ಓದಿಕೆಟ್ಟ ಕೂಚಭಟ್ಟ) ಎಂಬಂತೆ ಸಂಪ್ರದಾಯಗಳನ್ನು ತಿಳಿದೂ ದುರ್ಮಾರ್ಗಿಗಳಾಗಿರುವವರು ಕೆಲವರಿರಬಹುದು. ಅದಮಾತ್ರಕ್ಕೆ ಅವರಾಯುಜೀವನಯೋಗ್ಯತೆ ಎಂದು ತಿಳಿಯಬೇಕಲ್ಲದೆ, ಇದು ದಾಸಕೂಟ, ವ್ಯಾಸಕೂಟ ಪದ್ಧತಿಗಳ ತಪ್ಪೆಂಬುದಾಗಿಯಾಗಲಿ ಈ ಮಾರ್ಗಾವಲಂಬನವೇ ತಪ್ಪೆಂಬುದಾಗಿಯಾಗಲೀ ಎಂದೆಂದಿಗೂ ತಿಳಿಯಬಾರದು. ವ್ಯಾಸಕೂಟ ದಾಸಕೂಟಗಳೆಂದರೆ ದಧಿ ಘೃತ ನ್ಯಾಯದಲ್ಲಿರತಕ್ಕದ್ದಾಗಿರುವುವು. ಅಂದರೆ ನವನೀತ ಮಿಶ್ರಿತವಾದ ದಧಿಯನ್ನು ಜೀರ್ಣಶಕ್ತಿಯಿಲ್ಲದವರು ನವನೀತವನ್ನು ಪ್ರತ್ಯೇಕಿಸಿ ತಕ್ರವನ್ನು ಉಪಯೋಗಿಸುವಂತೆ ಆಚಾರ್ಯರ ಶಾಸ್ತ್ರವೆಂಬ ದಧಿಯಲ್ಲಿರತಕ್ಕ ಸತ್ವಭೂತವಾದ ತತ್ವಾರ್ಥವೆಂಬುವ ನವನೀತವನ್ನು ಪ್ರತ್ಯೇಕಿಸಿ ದಾಸರಾಯರುಗಳು ಮಾನವರ ಗ್ರಹಣಶಕ್ತಿಗೆ ತಕ್ಕಂತೆ ಪ್ರಾಕೃತ ಪದ್ಯವೆಂಬ ತಕ್ರ (ಮಜ್ಜಿಗೆ) ವನ್ನು ಏರ್ಪಡಿಸಿದುದಲ್ಲದೆ ಬೇರೆ ಇಲ್ಲ. ಮುಖ್ಯತಃ ದಾಸಕೂಟ ವ್ಯಾಸಕೂಟಗಳಲ್ಲಿ ಭೇದಭಾವನೆಯಿಂದ ಮತ್ಸರಿಗಳಾಗಿ ವ್ಯೂಹದ್ವೇಷಿಗಳೆಂದೆನಿಸಿಕೊಳ್ಳದೆ ಯಾರಿಗೆ ಶ್ರೀಆಚಾರ್ಯರು ಅನುಗ್ರಹಿಸಿ ಯಾವ ಮಾರ್ಗವನ್ನು ಪ್ರೇರಿಸುತ್ತಾರೋ ದಾಸಕೂಟವಾಗಲೀ ವ್ಯಾಸಕೂಟವಾಗಲೀ ಆ ಮಾರ್ಗದಿಂದಲೇ ಶ್ರೀಹರಿ

ಗುರುಗಳನುಗ್ರಹ ಪಡೆಯುವ ಸುಯೋಜನೆಯಿಂದ ಪಾರಾಗುವುದೇ ಧರ್ಮವೆಂದು ಹೇಳಬಹುದು.

॥ ಸರ್ವಜ್ಞಬಂಧವೇ ನಮಃ ॥

ಹದಿನಾಲ್ಕನೆಯ ತರಂಗ.

ಆಚರಣೆ, ನಮ್ಮ ಧರ್ಮ.

ಈ ವರಿವಿಗಿನ ಪ್ರಸ್ತಾಪ ವಿಚಾರದಲ್ಲಿ, ನಮ್ಮಾರ್ಯರಿಗೆ ಸೃಷ್ಟ್ಯಾದಿಯಿಂದಲೂ ಸ್ವಧರ್ಮಕ್ಕೇ ಆಗಾಗ್ಯೆ ವಿಘ್ನಗಳು ಬರುತ್ತಿದ್ದಿತೆಂಬುದಾಗಿಯೂ ಅಂತಹ ಅನಿವಾರ್ಯದ ದುರ್ಘಟಪ್ರಸಂಗದಲ್ಲಿಯೂ ಎಡೆಗೆಡದೆ ತಮ್ಮ ಧರ್ಮವನ್ನು ತಾವು ಪ್ರಯತ್ನದಿಂದ ಕಾಪಾಡಿಕೊಳ್ಳುತ್ತಿದ್ದರೆಂಬುದಾಗಿಯೂ ಧಾರ್ಮಿಕರ ಚಿತ್ತಸ್ಥೈರ್ಯತೆಗಾಗಿಯೇ ಶ್ರೀಹರಿಯು ಪ್ರೀತನಾಗಿ, ಸ್ವಯಂ ತಾನಾಗಲೀ ತನ್ನ ಭಕ್ತರಿಂದಾಗಲೀ ಧರ್ಮವು ಕೆಟ್ಟಕಾಲದಲ್ಲಿ ಧರ್ಮೋದ್ಧಾರವನ್ನು ನಡೆಸಿ, ಧಾರ್ಮಿಕರನ್ನು ಕೈಬಿಡದೆ ಕಾಪಾಡಿದನೆಂಬುದಾಗಿಯೂ ನಿಶ್ಚಿತವಾಯಿತು. ಅಂದ ಮೇಲೆ ನಮಗೂ ಧರ್ಮಮಾರ್ಗಕ್ಕೆ ಅನೇಕ ಅಡಚಣೆಗಳು ಬಂದೊದಗುವ ಪ್ರಸಂಗವು ಬರಬಹುದು. ಆದಮಾತ್ರಕ್ಕೆ ನಾವು ಯಾರು, ನಮ್ಮ ಜನ್ಮಭೂಮಿಯಾವುದು, ನಮ್ಮ ಕರ್ತವ್ಯವಾವುದು, ನಮ್ಮ ಪೂರ್ವಜರ ಶಕ್ತಿ ಎಂತಹದು ಎಂಬುವ ಇವೇ ಮುಂತಾದ ವಿಚಾರಗಳನ್ನು ಯೋಚಿಸಿದವರಾಗಿ ಇಂತಹ ಪೂಜ್ಯರಾದ ಆರ್ಯಕುಲೋತ್ಪನ್ನರಾದ ನಾವು ನಮ್ಮ ಪೂರ್ವಜರ ನೆನಪಿನಿಂದಲಾದರೂ ನಮ್ಮ ಕುಲಶೀಲಾದಿಗಳ ಗೌರವವನ್ನು ಉಳಿಹಿಸಬೇಕೆಂಬುದರಿಂದಲಾದರೂ ಎಲ್ಲದಕ್ಕೂ ಮುಖ್ಯವಾಗಿ ನಮ್ಮ ದೇಶದ ನಮ್ಮ ಧರ್ಮದ ನಮ್ಮ ಜನಾಂಗದ ಏಳಿಗೆಗೆಂತಲಾದರೂ ಇದಾವುದೂ ಲಕ್ಷಿಸದಿದ್ದರೂ ನಮ್ಮನ್ನು ನಾವು ಹಾಳುಮಾಡಿಕೊಂಡು ಆತ್ಮಹತ್ಯಾದೋಷಭಾಗಿಗಳಾಗದೆ ನಮ್ಮ ಉದ್ಧಾರಕ್ಕಾದರೂ ನಮ್ಮ ಕರ್ತವ್ಯವಾದ ಸ್ವಧರ್ಮಾನುಷ್ಠಾನಪರರಾಗಿ ಶ್ರೀಹರಿಯ ಅನುಗ್ರಹಕ್ಕೆ ಕಾರಣಭೂತರಾಗುವುದಕ್ಕೆ ಪ್ರಯತ್ನಪಡುವುದು ನಮ್ಮ ಕರ್ತವ್ಯವಲ್ಲವೆ. ಇದಕ್ಕಾಗಿಯೇ ಅವತರಿಸಿ

ದಾಸರಾಯರು ಕಾಲದೇಶವರ್ತಮಾನಕ್ಕೆ ತಕ್ಕಂತೆ ಸುಲಭ ಮಾರ್ಗದರ್ಶಿಗಳಾಗಿರುತ್ತಾರೆಂಬುವ ವಿಚಾರವನ್ನು ಹಿಂದೆಯೇ ವಿಜ್ಞಾಪಿಸಿರುವುದು ವಾಚಕರ ನೆನಪಿನಲ್ಲಿರಬಹುದು. ಮಹಾತ್ಮರ ವಾಕ್ಯದಲ್ಲಿ ಗೌರವಬುದ್ಧಿಯಿಂದ ನಾದಬ್ರಹ್ಮನಾದ ಸ್ವಾಮಿಯನ್ನು ಗಾನರೂಪದಿಂದ ತೃಪ್ತಿಪಡಿಸುವ ಸುಲಭಮಾರ್ಗವಾದ ಹರಿನಾಮಸಂಕೀರ್ತನೆಯನ್ನು ಮಾಡುತ್ತಾ ನಾವು ಪ್ರಯತ್ನಪಡಲು ಧನ್ಯರಾಗುವುದರಲ್ಲಿ ಸಂಶಯವಿಲ್ಲ. ಎತ್ತರವಾದ ಪ್ರದೇಶವನ್ನು ಮೆಟ್ಟಲು ಮೆಟ್ಟಲಾಗಿ ಏರಿ, ಗೊತ್ತಾದ ಶಿಖರವನ್ನು ಪ್ರಯತ್ನಪಟ್ಟ ಪಕ್ಷದಲ್ಲಿ ಮುಟ್ಟಿಯೇ ಮುಟ್ಟುವಂತೆ ದಿವಸದ ಒಂದು ಕ್ಷಣವನ್ನಾದರೂ ಸ್ವಾಮಿಯ ಸೇವೆಗಾಗಿ ವಿನಿಯೋಗಿಸುತ್ತಾ ಬರುವ ಅಭ್ಯಾಸ ಮಾಡಿದಲ್ಲಿ ನಮ್ಮಾರ್ಯರು ನಮ್ಮ ಉದ್ಧಾರಕ್ಕಾಗಿ ತೋರಿಸಿದ ಮಾರ್ಗದ ಸ್ಮರಣೆಯಾದರೂ ನಮಗೆ ಉಂಟೆಂಬುದರಿಂದಲಾದರೂ ಶ್ರೀಸ್ವಾಮಿಯು ಕೃಪೆಮಾಡದಿರನು. ಇದೇ ನಮ್ಮಿಂದಲಾಗುವ ಧರ್ಮೋದ್ಧಾರ.

ಮಂಗಳ.

ಧರ್ಮಸ್ಥಾಪನೆಗಾಗಿಯೇ ಅವತರಿಸಿ ಧಾರ್ಮಿಕರ
ಪರನಾಗಿ ಧರ್ಮಸ್ವರೂಪಿಯೇ ಆದ ಶ್ರೀಹರಿಗೂ
ಧರ್ಮಾತ್ಮರಿಗೂ ಅನಂತಾನಂತ ಪ್ರಣಾಮ
ಪೂರ್ವಕ ಹರಿಗುರುಗಳನ್ನು ಸ್ಮರಿಸಿ ನನ್ನ
ಲೇಖನಕ್ಕೆ ಮಂಗಳ
ಮಾಡುವೆನು.

॥ ಶ್ರೀಮಧ್ವೇಶಾರ್ಪಣಮಸ್ತು ॥

ವಿಜಯದಾಸರ ಸುಳಾದಿಗಳು.

ಈ ಗ್ರಂಥವು ಕನ್ನಡಿಗರಿಗೆ ಕರ್ಣಾನಂದಕರವಾಗಿ ವೇದಾಂತ ತತ್ವವನ್ನು ತಿಳಿಯಲು ಅತ್ಯುಪಯುಕ್ತವಾಗಿರುವುದು. **ಬೆಲೆ: ೧—೦—೦**

ಸ್ತ್ರೀಜಪಕ್ರಮ (ಗುರುಮಂತ್ರಾದಿ)

ಈ ಚಿಕ್ಕ ಗ್ರಂಥವು ಹೆಂಗಸರಿಗೆ ಪ್ರಾತಃಕೃತ್ಯ ಮೊದಲ್ಗೊಂಡು ಸ್ನಾನವಿಧಿ ತಿಲಕಧಾರಣಜಪ ಸೂರ್ಯಾದಿಪ್ರಾರ್ಥನಾ ವಿಧಿಗಳನ್ನು ತಿಳಿದುಕೊಳ್ಳಲು ಅಲ್ಲಲ್ಲಿ ಕನ್ನಡ ಟಿಪ್ಪಣಿಸಹಿತವಾಗಿರುವುದರಿಂದ ಅತ್ಯವಶ್ಯಕರವಾಗಿದೆ.

ಬೆಲೆ: ೦—೨—೦

ಶ್ರೀಮನ್ಮಧ್ವಾಚಾರ್ಯರವರ ಸಂಕ್ಷಿಪ್ತಚರಿತ್ರೆ.

ಈ ಚಿಕ್ಕ ಪುಸ್ತಕವು ಅತಿ ಸುರಸವಾಗಿ ನೂತನಕ್ರಮಕ್ಕೊಳಪಟ್ಟು ವಾಚಕರಿಗೆ ಹೃದಯಾನಂದಕರವಾಗುವಂತೆ ವಿರಚಿತವಾಗಿ ಪ್ರಕಟಿತವಾಗಿದೆ.

ಬೆಲೆ: ೦—೨—೦

ಶ್ರೀಪಾದರಾಯರ ಮತ್ತು ಶ್ರೀವ್ಯಾಸರಾಯರ ಕೀರ್ತನೆಗಳು.

(ಸುಳಾದಿಗಳು.)

ಈ ಗ್ರಂಥವು ಕನ್ನಡನಾಡಿಗರ ದಾಸಕೂಟದ ಆದಿಪುರುಷರಾದ ಶ್ರೀಪಾದರಾಯರಿಂದಲೂ, ಅವರ ಶಿಷ್ಯರೆನಿಸಿದ ಶ್ರೀವ್ಯಾಸರಾಯ ಮಹಾ ಮುನಿಗಳಿಂದಲೂ ವಿರಚಿತಗಳಾದ ತತ್ವಬೋಧಕ ಸುಂದರಕೀರ್ತನೆಗಳಿಂದ ತುಂಬಿರುವುದು.

ಬೆಲೆ: ೦—೮—೦

ಶ್ರೀರಾಘವೇಂದ್ರ ಗುರುಭಜನ (ವೇ॥ ಶ್ರೀಪಾದದಾಸರು) ೦—೦—೬

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉಡುಪಿ.

ಹರಿಕಥಾಮೃತಸಾರ (ಜಗನ್ನಾಥದಾಸರು)	...	೦–೧[illegible]–೦
ಪುರಂದರದಾಸರಕೀರ್ತನೆ ಭಾಗ ೧, ೨, ೩,	...	೧–೧೪–೦
ವಾದಿರಾಜರಕೀರ್ತನೆ ಭಾಗ ೧ ...	...	೦–೮–
ಕನಕದಾಸರಕೀರ್ತನೆ ಭಾಗ ೧ ...	...	೦–೮–
ಗೋಪಾಲದಾಸರಕೀರ್ತನೆಗಳು ...	...	೦–೮–೦
ಜಗನ್ನಾಥದಾಸರಕೀರ್ತನೆ ಭಾಗ ೧	...	೦–[illegible]–೦
ವಿಜಯದಾಸರಕೀರ್ತನೆ ...	...	೦–೧೦–೦
ವಿಜಯದಾಸರ ಸುಳಾದಿಗಳು ...	...	೧–೦–೦
ವೆಂಕಟೇಶಪಾರಿಜಾತ (ಅನಂತಾದ್ರೀಶ)	...	೦–೮–೦
ಹನುಮದ್ವಿಲಾಸವು (ಖಾದ್ರಿನೃಸಿಂಹ)	...	೦–೮–೦
ಭ್ರಮರಗೀತೆ ಶ್ರೀವಾದಿರಾಜಕೃತ ...	...	೦–[illegible]–೦
ಉಡುಪಿಕ್ಷೇತ್ರಮಹಿಮಾ (ಬೆಳಸಿದ ೨ನೆಯ ಛಾಪಾ)		೦–೪–
ಉದಯರಾಗ ಭಾಗ ೧ ...	...	೦–೪–೦
ಉಗಾಭೋಗಗಳು ಭಾಗ ೧ ...	...	೦–೪–
ಉಗಾಭೋಗಗಳು ಭಾಗ ೨ ...	...	೦–೨–
ಕೋಲುಹಾಡು (ಮೋಹನದಾಸರಿಂದ)	...	೦–೩–
ಜಗನ್ನಾಥದಾಸರಚರಿತ್ರೆ (ನಾ. ಭೀ. ಕಲಮದಾನಿ)	...	೦–೪–೦
ಉಡುಪಿ ಶ್ರೀಕೃಷ್ಣಚರಿತ್ರೆ (ವರದತಿಮ್ಮಪ್ಪ)	...	೦–೩–
ದೇವಾಲಯ	...	೦–೪–೦
ಪತಿಪೂಜೆ, ಪತಿವ್ರತಾಧರ್ಮ ...	...	೦–
ತುಳುಭಾಷಕನ್ಯೋಪದೇಶ (ಸುಬ್ರಹ್ಮಣ್ಯಶಾಸ್ತ್ರಿ)	...	೦–
ವಾದಿರಾಜಗುರುವರಚರಿತ್ರೆ ...	...	೦–
ಶ್ರೀಮನ್ಮಧ್ವಾಚಾರ್ಯರವರ ಸಂಕ್ಷಿಪ್ತಚರಿತ್ರೆ	...	೦–

...ಿ.

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ, ಉ...